www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 7 ಸಂಚಿಕೆ -2 ಜನವರಿ 2012
Volume : VII Issue : II January 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

**ಒಳ ಪುಟಗಳಲ್ಲಿ**

1. ಪ್ರಕಟಣೆ
2. ವಯಸ್ಕರ ಸ್ವರ
3. ಇಲ್ಲಿಗೆ ಏರಿ ಬಾ
4. ಯಾವ ಆತ್ಮನ ಅಧೀನದಲ್ಲಿದ್ದೀರಿ
5. ಸರ್ವೆಸ್ಪರ್ ದೇವಾನ್ ಸಂಸಾರ್ ರಚ್ಲೊ.
6. ಪವಿತ್ರಾತ್ಮನ ದೀಕ್ಷಾಸ್ನಾನ
7. ನೂತನ ಮಾರ್ಗದಲ್ಲಿ ನಡೆಸುವ ದೇವರು
8. ನಮ್ಮ ಪ್ರಶ್ನೆ ನಿಮ್ಮ ಉತ್ತರ
9. ಅನಾಥರ ಸ್ವರ
10. ಪ್ರಶ್ನೋತ್ತರಗಳ ಸ್ವರ
11. ದೇವದರ್ಶನ ಗುಡಾರವೂ ಅಂಗಳವೂ
12. ಆರೋಗ್ಯ ಸ್ವರ
13. ಪ್ರಾರ್ಥನಾ ಸ್ವರ
14. ಯೌವನಸ್ಥರ ಸ್ವರ
15. ಜಾನಿ
16. ಸ್ಥಳೀಯ ಮತ್ತು ವಿದೇಶ ಸುದ್ಧಿ
17. ಮಕ್ಕಳ ಸ್ವರ
18. ಸಂತೋಷವುಳ್ಳ ಕುಟುಂಬ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಮಧುರವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು ಹಾಗೂ ಹೊಸ ವರ್ಷದ ಶುಭಾಶಯಗಳು. ಈ ಹೊಸ ವರ್ಷದಲ್ಲಿ ಪ್ರಿಯ ವಾಚಕರಿಗೆ ಕರ್ತನು ಇಟ್ಟಿರುವ ಹೊಸ ಆಶೀರ್ವಾದಗಳ ಬಗ್ಗೆ ತಿಳಿಸಲು ಇಷ್ಟ ಪಡುತ್ತೇನೆ.

1. ಹೊಸ ಹೃದಯ (1 ಸಮು. 10:9).
2. ಶುದ್ಧ ಹೃದಯ (ಕೀರ್ತ. 51:10).
3. ದ್ವಿಗುಣವಾದ (ನೂತನ) ಆಶೀರ್ವಾದ (ಯೋಬ. 42:9-10).
4. ನೂತನ ಕೀರ್ತನೆ ಹಾಡುವಂತೆ ಮಾಡುವುದು (ಕೀರ್ತ. 40:3).
5. ನೂತನ ನಾಲಿಗೆ (ಯೆಶಾ. 6:7).
6. ಹೊಸ ಬಲ (ಯೆಶಾ. 40:31).
7. ಹೊಸ ಕಾರ್ಯ (ಯೆಶಾ. 43:18-19).
8. ಹೊಸ ಹೆಸರು (ಯೆಶಾ. 62:2).
9. ಹೊಸ ಕೃಪೆ (ಪ್ರಲಾ. 3:22-23).
10. ನೂತನ ಸ್ವಭಾವ (ಯೆಹೆ. 11:19).
11. ಹೊಸ ಮನಸ್ಸು (ಯೆಹೆ. 36:26).
12. ಹೊಸ ಆತ್ಮ (ಯೆಹೆ. 36:27).
13. ಹೊಸ ಮನಸ್ಸಾಕ್ಷಿ (1 ಪೇತ್ರ. 3:21).
14. ನೂತನ ಸೃಷ್ಟಿ (1 ಕೊರಿ. 5:17).

ನೂತನ ವರ್ಷದಲ್ಲಿ ಹೊಂದುವ ನೂತನ ಆಶೀರ್ವಾದಗಳಲ್ಲಿ ನೂತನ ಸ್ವಭಾವವೂ, ನೂತನ ವ್ಯಕ್ತಿತ್ವವೂ ಸೇರಿ, ನೂತನವಾಗಿ, ಹೊಸದಾಗಿ ಹುಟ್ಟಿದ ಅನುಭವವುಳ್ಳ ಆತ್ಮವನ್ನು ಹೊಂದಿಕೊಳ್ಳೋಣ. ಕಳೆದ ವರ್ಷವೆಲ್ಲಾ ನೀವು ನಮ್ಮ ಸೇವೆಗೆ ವಿಧ ವಿಧವಾಗಿ ಸಹಾಯ ಮಾಡಿದ್ದೀರಿ ಆರ್ಥಿಕ ಸಹಾಯ, ವಸ್ತು ರೂಪದಲ್ಲಿ, ಅಕ್ಕಿ, ಬಟ್ಟೆಗಳನ್ನು ನೀಡಿ , ಪ್ರಾರ್ಥನೆಯ ಮೂಲಕ ಪ್ರೋತ್ಸಾಹಿಸಿದ್ದೀರಿ. ಇವೆಲ್ಲವುಗಳಿಗಾಗಿ ನಿಮಗೆ ಅನಂತ ಅನಂತ ವಂದನೆಗಳು. ಕರ್ತನು ನಿಮ್ಮನ್ನು ಆಶೀರ್ವದಿಸಿ ಅಭಿವೃದ್ಧಿಪಡಿಸಿ ನಡೆಸಲಿ ಎಂದು ಪ್ರಾರ್ಥಿಸುತ್ತೇನೆ. ಇಲ್ಲಿಯವರೆಗೂ ಕೊಟ್ಟ ಸಹಕಾರವನ್ನು ಮುಂದಿನ ದಿನಗಳಲ್ಲೂ ಕೊಡಬೇಕಾಗಿ ವಿನಂತಿಸುತ್ತೇನೆ. ಜೈ ಯೇಸು ಕ್ರಿಸ್ತನಿಗೆ ಆಮೆನ್.

*ಹಿರಿಯ ಸಂಪಾದಕ*
**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ವಿವಾಹದ ನಿಶ್ಚಯ (ENGAGEMENT): **"ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ"** (2 ಕೊರಿ. 11:2). ವಿವಾಹ ಸಮಾರಂಭಕ್ಕಿಂತ ಕೆಲವು ದಿನಗಳ ಹಿಂದೆ ಮದುವೆಯ ನಿಶ್ಚತಾರ್ಥ ನಡೆಸುವುದು ಒಂದು ರೂಢಿಯಲ್ಲಿರುವ ಸಂಗತಿಯಾಗಿದೆ. ಕೇವಲ ತನಗಾಗಿ ನಿಶ್ಚಯ ಮಾಡಿಕೊಂಡ ಮದಲಗಿತ್ತಿಯಾದ ಸಭೆಯನ್ನು ಒಯ್ಯಲೆಂದೇ ಕ್ರಿಸ್ತನು ಮಧ್ಯಾಕಾಶಕ್ಕೆ ಆಗಮಿಸುವುದು. ಕ್ರಿಸ್ತನು ತನ್ನ ಮೊದಲನೆಯ ಬರೋಣದಲ್ಲಿ ಪಾಪಿಗಳಿಗಾಗಿ ತನ್ನ ಪ್ರಾಣವನ್ನೇ ಅರ್ಪಿಸಿದನು. ತನ್ನನ್ನು ನಂಬುವವರಿಗೆ ನಿತ್ಯಜೀವವನ್ನು ವಾಗ್ದಾನ ಮಾಡಿದ್ದಾನಲ್ಲದೆ, ದೇವರ ಮಕ್ಕಳಾಗುವ ಅಧಿಕಾರವನ್ನು ಕೊಟ್ಟನು (ಯೋಹಾ. 1:12–13). ಹೀಗೆ ದೇವರಿಂದ ಕರೆಯಲ್ಪಟ್ಟು ರಕ್ಷಣೆ ಹೊಂದಿದ ಗುಂಪೇ ದೇವರ ಸಭೆ. ಈ ಸಭೆಯನ್ನು ಕ್ರಿಸ್ತನು ಅತ್ಯಧಿಕವಾಗಿ ಪ್ರೀತಿಸುತ್ತಿದ್ದಾನೆ (ಎಫೆ. 5:25).

ಒಬ್ಬ ವ್ಯಕ್ತಿಯು ಕರ್ತನಾದ ಯೇಸುಕ್ರಿಸ್ತನನ್ನು ಕರ್ತನು, ರಕ್ಷಕನೆಂದು ನಂಬಿ ಬಾಯಿಯಿಂದ ಅರಿಕೆ ಮಾಡಿಕೊಂಡು ಆತನೇ ನನ್ನ ರಕ್ಷಕನೆಂದು ಒಡೆಯನೆಂದು ಅಂಗೀಕರಿಸುವಾಗ ಆ ವ್ಯಕ್ತಿಯು ಕರ್ತನಾದ ಯೇಸುಕ್ರಿಸ್ತನೊಂದಿಗೆ ವಿವಾಹ ನಿಶ್ಚಿತಾರ್ಥ ಮಾಡಿದಂತಾಗುತ್ತದೆ (ರೋಮ. 10:9–10, 2ಕೊರಿ. 11:2). ಹೇಗೆ ನಿಶ್ಚಿತಾರ್ಥ ಮಾಡಿದ ಮದಲಗಿತ್ತಿಯಾದ ಸಭೆಯನ್ನು **"ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ, ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು"** (ಎಫೆ. 5:27). ಆದರೆ ಕ್ರಿಸ್ತನ ಬರೋಣಕ್ಕಿಂತ ಮುಂಚೆಯೇ ಸೈತಾನನು ಹವ್ವಳನ್ನು ವಂಚಿಸಿದೋಪಾದಿಯಲ್ಲಿ ಅನೇಕರು ಕ್ರಿಸ್ತನೊಂದಿಗೆ ಮಾಡಿದ ಒಡಂಬಡಿಕೆಯನ್ನು ಬಿಟ್ಟು ಕೆಟ್ಟು ಹೋಗುತ್ತಿದ್ದಾರೆ. **"ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟುಹೋದೀತೆಂದು ನನಗೆ ಭಯವುಂಟು"** (2 ಕೊರಿ. 11:3). ಸಭೆಯ ಸದಸ್ಯರು ಒಬ್ಬೊಬ್ಬರು ಒಂದೊಂದು ಮದಲಗಿತ್ತಿಯಲ್ಲಿ ಸಭೆ ಪೂರ್ತಿಯಾಗಿ ಯಜ್ಞದ ಕುರಿಯಾದಾತನ ಮದಲಗಿತ್ತಿಯಾಗಿದೆ. ಇದೊಂದು ಆತ್ಮೀಕ ಸಂಬಂಧವಾಗಿದೆ. ಇದನ್ನು ಕುರಿತು ಪೌಲನು ಶುದ್ಧಕನ್ಯೆಯಂತೆ ಎಂಬ ಏಕವಚನವನ್ನು ಉಪಯೋಗಿಸಿದ್ದಾನೆ (2 ಕೊರಿ.11:2).

**ಮದಲಿಂಗನು ಯಾರು ? ಮದಲಗಿತ್ತಿ ಯಾರು?**

ಪ್ರಕ. 19:6–9. ಯಜ್ಞದ ಕುರಿಯಾದಾತನು ಕ್ರಿಸ್ತನಾಗಿರುವುದರಿಂದ ಮದಲಿಂಗನು ಕ್ರಿಸ್ತನಾಗಿದ್ದಾನೆ. ಕ್ರಿಸ್ತನು ಮನುಷ್ಯ ಕುಮಾರನಾಗಿ ಹುಟ್ಟಿರುವುದರಿಂದ ತನ್ನ ಮದಲಗಿತ್ತಿಯಾದ ಸಭೆ ಇವತ್ತು ಮನುಷ್ಯತ್ವದಲ್ಲೇ ಇರುವುದರಿಂದಲೂ ತಿರಸ್ಕರಿಸಲ್ಪಟ್ಟ ಕ್ರಿಸ್ತನು ಇವತ್ತು ಪರಲೋಕದಲ್ಲಿ ಮನುಷ್ಯ ಕುಮಾರನಂತಿದ್ದಾನೆ ಪ್ರಕ. 1:13–18 ಆದರಿಂದಲೇ ಸಾಮ್ಯದಲ್ಲಿ ಕ್ರಿಸ್ತನು ತನ್ನನ್ನು ಅರಸನ ಮದುವೆಯ ರಾಜಕುಮಾರನೆಂದು ಹೇಳಿರುವುದು (ಮತ್ತಾ. 22:1–14). ಮದಲಿಂಗನಾದ ಕ್ರಿಸ್ತನನ್ನು ಮೊಟ್ಟ ಮೊದಲು ಈ ಲೋಕಕ್ಕೆ ಪರಿಚಯಪಡಿಸಿದ್ದು ಸ್ನಾನಿಕ ಯೋಹಾನನಾಗಿದ್ದಾನೆ. ಮದಲಗಿತ್ತಿಯುಳ್ಳವನೇ ಮದಲಿಂಗನು (ಯೋಹಾ. 3:29) ಎಂದು ತನ್ನ ಹಿಂದೆ ಬರಲಿರುವ ಕ್ರಿಸ್ತನ ಕುರಿತು ಸಾಕ್ಷಿ ಹೇಳಿದನು.

ಹಳೆ ಒಡಂಬಡಿಕೆಯ ಬರಹಗಾರರು ಯೆಹೋವನ ಮದಲಗಿತ್ತಿಯಾಗಿ ಇಸ್ರಾಯೇಲ್ ಜನಾಂಗವನ್ನು ಆತ್ಮೀಕ ರೀತಿಯಲ್ಲಿ ಚಿತ್ರೀಕರಿಸಿದ್ದಾನೆ. ನಿನ್ನ ಸೃಷ್ಟಿ ಕರ್ತನೇ ನಿನ್ನ ಪತಿ ಆತನ ಹೆಸರು ಸೇನಾಧೀಶ್ವರನಾದ ಯೆಹೋವ (ಯೆಶಾ. 54:5, ಹೋಶೇ. 2:29). ಹಳೆ ಒಡಂಬಡಿಕೆಯ ಇಸ್ರಾಯೇಲ್ ಜನಾಂಗದ ಪತಿ ತಂದೆಯಾದ ಯೆಹೋವ ದೇವರಾಗಿದ್ದಾನೆ. ಹೊಸ ಒಡಂಬಡಿಕೆಯ ಸಭೆಯ ಮದಲಿಂಗನು ಕರ್ತನಾದ ಯೇಸುಕ್ರಿಸ್ತನಾಗಿದ್ದಾನೆ.

**ಮದಲಗಿತ್ತಿ ಯಾರು** ?

ಕರ್ತನಾದ ಯೇಸು ಕ್ರಿಸ್ತನ (ಮದಲಿಂಗನ) ನಿಜವಾದ ಮದಲಗಿತ್ತಿ ಯಾರು ಎಂದು ಅನೇಕರು ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಕೆಲವರು ಹೀಗೆ ಕಲಿಸುವವರಿದ್ದಾರೆ. ಹೊಸ ಭೂಮಿಯ ಮೇಲೆ ಹೊಸ ಯೆರೂಸಲೇಮು ಬಂದಾಗ ಅದಕ್ಕೆ ಯೆಹೋವನ ಮದಲಗಿತ್ತಿ ಎಂದು ಕರೆದಿರುವುದರಿಂದ ಅದರಲ್ಲಿ ವಾಸಮಾಡುವಂಥವರೂ ಅಂದರೆ ಹಳೆ ಒಡಂಬಡಿಕೆಯ ಭಕ್ತರೂ, ಸಂಕಟಕಾಲದಲ್ಲಿ ರಕ್ತಸಾಕ್ಷಿಗಳಾಗಿ ಸತ್ತವರು, ರಕ್ಷಣೆ ಹೊಂದಿದವರು ಇವರೆಲ್ಲರೂ ಯಜ್ಞದ ಕುರಿಯಾದಾತನ ಮದಲಗಿತ್ತಿ ಎಂದು ಹೇಳುತ್ತಾರೆ. (ವಾಗ್ದಾನವು ನನ್ನ ವಿಷಯವಲ್ಲ ಆದರೆ ಸತ್ಯವೇದದ ವಾಕ್ಯಗಳ ಆಧಾರದಲ್ಲಿ ನಾವು ಕಲಿಯೋಣ) **"ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದುಬರುವದನ್ನು ಕಂಡೆನು; ಅದು ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು"** (ಪ್ರಕ. 21:2). **"ಕಡೇ ಏಳು ಉಪದ್ರವಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತಾಡುತ್ತಾ ಬಾ, ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಯನ್ನು ನಿನಗೆ ತೋರಿಸುವೆನು ಎಂದು ಹೇಳಿ ದೇವರಾತ್ಮವಶನಾದ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ**

> ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು (ಆಮೋ. 3:7).

**ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದುಬರುವದನ್ನು ನನಗೆ ತೋರಿಸುವೆನು"** (ಪ್ರಕ. 21:9–10). ಎಂದು ಹೇಳಿ ದೇವರಾತ್ಮವಶನಾದ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ ಯೆರೂಸಲೇಮ ಎಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವುದನ್ನು ನನಗೆ ತೋರಿಸಿದನು.

ಈ ಎರಡು ವಾಕ್ಯಗಳ ಆಧಾರದಿಂದ ಕೆಲವರು ಹೇಳುವುದೇನೆಂದರೆ ಪರಲೋಕದಿಂದ ಹೊಸ ಭೂಮಿಗೆ ಇಳಿದು ಬರುವ ಹೊಸ ಯೆರೂಸಲೇಮನ್ನು ಮದಲಗಿತ್ತಿ ಎಂದು ಇಲ್ಲಿ ಕರೆದಿರುವುದರಿಂದ ಅದರಲ್ಲಿ ವಾಸ ಮಾಡುವಂಥ

1. ಹಳೆ ಒಡಂಬಡಿಕೆಯ ಭಕ್ತರು.
2. ಹೊಸ ಒಡಂಬಡಿಕೆಯ ವಿಶ್ವಾಸಿಗಳು.
3. ಸಂಕಟ ಕಾಲದಲ್ಲಿ ಎತ್ತಲ್ಪಟ್ಟ 1 ಲಕ್ಷ ನಾಲ್ವತ್ತನಾಲ್ಕು ಸಾವಿರ ಜನರು.
4. ಸಂಕಟ ಕಾಲದಲ್ಲಿ ರಕ್ತ ಸಾಕ್ಷಿಗಳಾಗಿ ಸತ್ತವರು ಇವರೆಲ್ಲರೂ ಮದಲಿಂಗನಾದ ಯೇಸುಕ್ರಿಸ್ತನ ಮದಲಗಿತ್ತಿ ಎಂದು ಹೇಳುತ್ತಾರೆ.

ಮುಂದುವರಿಯುವದು.....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

# ದೇವರೊಂದಿಗೆ ನಡೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ವಯಸ್ಕರ ಸ್ವರ**

ಆದಿ. 5:24 ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು. 'ಹನೋಕ' ಅಂದರೆ ಪ್ರತಿಷ್ಟಿಸಲ್ಪಟ್ಟವನು ಎಂದರ್ಥ. ನಿಜವಾಗಿಯೂ ತನ್ನ ಜೀವಿತ ಕಾಲವೆಲ್ಲಾ ದೇವರಿಗಾಗಿ ಪ್ರತಿಷ್ಟಿಸಲ್ಪಟ್ಟವನಾಗಿ ದೇವರೊಂದಿಗೆ ಅನ್ಯೋನ್ಯವಾಗಿ ನಡೆದ ವ್ಯಕ್ತಿ ಎಂದು ಸತ್ಯವೇದ ಹೇಳುತ್ತದೆ. ನಿಜವಾಗಿಯೂ ನಾವು ಈ ಲೋಕದಲ್ಲಿ ಕ್ರೈಸ್ತಿಯ ಜೀವಿತ ಜೀವಿಸುವಾಗ ಖಂಡಿತವಾಗಿಯೂ ಆ ಕ್ರೈಸ್ತಿಯ ಜೀವಿತದಲ್ಲಿ ಬೇಕಾದ ಮೂರು ಮಹತ್ತಾದ ಕಾರ್ಯಗಳಾವುದೆಂದರೆ 1) ಪಶ್ಚಾತ್ತಾಪ 2) ತೀರ್ಮಾನ 3) ದೇವರೊಂದಿಗೆ ನಡೆಯುವುದು (walk with god) ಈ ಮೂರು ಕಾರ್ಯಗಳಲ್ಲಿ ನಾವು ನಮ್ಮ ಜೀವಿತದ ಕಾಲವೆಲ್ಲಾ ದೇವರೊಂದಿಗೆ ನಡೆಯುವುದು ಮುಖ್ಯವಾಗಿದೆ. ಸತ್ಯವೇದ ಹೇಳುತ್ತದೆ, "ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ. ಈ ಲೋಕದಲ್ಲಿ ದೇವ ಮಕ್ಕಳೆಂದು ಕರೆಸಿಕೊಳ್ಳುವ ನಾವು ದೇವರೊಂದಿಗೆ ನಡೆಯುವುದು ಮುಖ್ಯವಾಗಿದೆ. ಐಗುಪ್ತದೇಶದ ದಾಸತ್ವದಿಂದ ಬಿಡಿಸಿದ ದೇವರು ತನ್ನ ಪ್ರಜೆಗಳಾದ ಇಸ್ರಾಯೇಲ್ಯರಿಗೆ ಹೇಳುತ್ತಾನೆ, **"ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟು ಮಾಡುವೆನು"** ಎಂದು ಹೇಳಿದ್ದಾಗ ದೇವ ಮನುಷ್ಯನಾದ ಮೋಶೆಯು ತಕ್ಷಣ ಹೇಳುತ್ತಾನೆ, **"ನೀನೆ ನಮ್ಮ ಸಂಗಡ ಬಾರದೆ ಹೋದರೆ ನಮ್ಮನ್ನು ಇಲ್ಲಿಂದ ಹೋಗಗೊಡಿಸಬಾರದು"**. ನೀನು ನಮ್ಮ ಸಂಗಡ ಬರುವುದರಿಂದಲೇ ಹೊರತು ಬೇರೆ ಯಾತರಿಂದ ತಿಳಿದು ಬರುವುದು? (ವಿಮೋ. 33:14–15). ಹೌದು ಪ್ರಿಯ ದೇವ ಮಗುವೇ, ಇಂದು ನೀನು ದೇವರೊಂದಿಗೆ ದೇವರು ನಿನ್ನೊಂದಿಗೆ ನಡೆಯುವಾಗಲೇ ನಾವು 'ವಿಶೇಷವಾಗಿದ್ದೇವೆಂದು ತೋರಬರುವುದು. ನಮ್ಮ ದೇವರು ನಮ್ಮೊಂದಿಗೆ ನಡೆಯುವ ದೇವರು **"ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಸಮೀಪವಾಗಿರುವನು"** (ಧರ್ಮೋ. 4:7).

ಅರಸನಾದ ದಾವೀದನು ನಿಶ್ಚಯವಾಗಿಯೂ ಹೇಳುತ್ತಾನೆ, **"ದೇವರು ನನ್ನ ಸಂಗಡ ಇರುವದು ನಿಶ್ಚಯ; ನಾನು ಆತನಿಗೆ ಮೊರೆಯಿಡುವಾಗಲೇ ನನ್ನ ಶತ್ರುಗಳು ಪಕ್ಕನೆ ಪಲಾಯಾನ ಮಾಡುವರು"** (ಕೀರ್ತ. 56:9). **"ಯೆಹೋವನು ನನಗೆ ಇದ್ದಾನೆ; ಆತನೇ ನನಗೆ ಸಹಾಯಕನು; ನನ್ನ ವೈರಿಗಳಿಗಾಗುವ ಶಿಕ್ಷೆಯನ್ನು ನೋಡುವೆನು"** ಎಂದು (ಕೀರ್ತ. 118:7). ಕೀರ್ತನೆಗಾರನು ನಿಶ್ಚಯದೊಡನೆ ಬರೆಯುತ್ತಾನೆ, ಪ್ರಿಯ ದೇವ ಮಗುವೇ, ಇದನ್ನು ಓದುವ ನೀನು ನಿಶ್ಚಯದೊಡನೆ ಈ ಮಾತನ್ನು ಹೇಳಲು ಸಾಧ್ಯನಾ? **"ಯೇಸು ನನ್ನೊಂದಿಗೆ ಇದ್ದಾನೆ. ನಾನು ಯೇಸುನೊಂದಿಗೆ ಸದಾ ನಡೆಯುತ್ತಿದ್ದೇನೆ"**. ಹಲ್ಲೆಲೂಯ. ಜೀವಿತದ ಕಷ್ಟ ಸಂಕಟ ಹೋರಾಟಗಳಲ್ಲಿ ಹಾದು ಹೋಗುವ ದೇವ ಮಗುವೇ, ನಿನ್ನ ವೈರಿ ನಿನಗೆ ವಿರುದ್ಧವಾಗಿ ಹೋರಾಡುವಾಗ ಭಯಪಡಬೇಡಾ. **"ದೇವರು ನಮ್ಮ ಸಂಗಡವಿದ್ದರೆ ನಮ್ಮನ್ನು ಎದುರಿಸುವವರು ಯಾರೂ ಇಲ್ಲ"** (ರೋಮ. 8:31).

ದೇವರು ಯೆಹೋಶುವನಿಗೆ ಹೇಳುತ್ತಾನೆ, **"ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು. ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ"** (ಯೋಹಾ. 1:5–6). ದೇವ ಮಗುವೇ, ನಿನಿಗೆ ವಿರುದ್ಧವಾಗಿ ಸಮಸ್ಯೆಗಳ ಮೇಲೆ ಸಮಸ್ಯೆ, ಬಾಧೆಗಳ ಮೇಲೆ ಬಾಧೆ ಬಂದರೂ ಇಮ್ಮಾನುವೇಲನಾದ ಕರ್ತನು ನಿನ್ನೊಂದಿಗೆ ಇರುವನು, ಧೈರ್ಯದಿಂದಿರು. ದೇವ ಮನುಷ್ಯನಾದ ಮೋಶೆಯು ಸತ್ತನಂತರ ಇಸ್ರಾಯೇಲ್ ಜನರನ್ನು ನಡೆಸುವ ಭಾರ ಯೆಹೋಶುವನ ಮೇಲೆ ಬಿತ್ತು. ದೇವರು

ನೀತಿವಂತನ ವಂಶವು ಶುಭಹೊಂದುವದು. ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು
(ಕೀರ್ತ. 112:2).

ಯೆಹೋಶುವನನ್ನು ಧೈರ್ಯಪಡಿಸಿ ಯೋರ್ದಾನ್ ನದಿಯನ್ನು ದಾಟಿಸುವುದಕ್ಕೆ ಮುನ್ನಡೆಸುತ್ತಾನೆ. (ಅಧ್ಯಾಯ 1 ಯೆಹೋಶುವ ಪುಸ್ತಕದಲ್ಲಿ ನಾವು ಓದಬಹುದು). ಆದರೆ 7ನೇ ಅಧ್ಯಾಯದಲ್ಲಿ ದೇವರು ಯೆಹೋಶುವನಿಗೆ ಹೇಳುತ್ತಾನೆ, **"ಶಾಪಕ್ಕೆ ಕಾರಣವಾದದ್ದನ್ನು ನಿಮ್ಮ ಮಧ್ಯದಿಂದ ತೆಗೆದುಹಾಕುವವರೆಗೂ ನಾನು ನಿಮ್ಮ ಸಂಗಡ ಬರುವುದಿಲ್ಲ"** (ಯೆಹೋ. 1:12). ಇಲ್ಲಿ ನಾವು ನೋಡುತ್ತೇವೆ ಇಸ್ರಾಯೇಲ್ಯರು ಶತ್ರುಗಳನ್ನು ಗೆಲ್ಲಲಾರದೆ ಬೆನ್ನು ತೋರಿಸುವ ಸ್ಥಿತಿಗೆ ಬಂದರು. ಇಸ್ರಾಯೇಲ್ಯರ ಸಂಗಡ ದೇವರು ಇಲ್ಲದೆ ಇರುವುದೇ ಕಾರಣ.

ಪ್ರಿಯ ದೇವ ಮಗುವೇ, ಇಂದು ದೇವರು ನಿನ್ನೊಂದಿಗೆ ಇದ್ದಾಗ ವೈರಿಯನ್ನು ಸುಲಭವಾಗಿ ಜಯಿಸಬಹುದು. ಆದರೆ ದೇವರು ನಿನ್ನ ಜೊತೆ ಇಲ್ಲದಿದ್ದರೆ ವೈರಿ ನಿನ್ನ ಮೇಲೆ ಜಯ ಸಾಧಿಸುವನು. ದೇವರು ಯೆಹೋಶುವನಿಗೆ ಹೇಳುತ್ತಾನೆ, ನಿಮ್ಮ ಮಧ್ಯದಲ್ಲಿ ಶಾಪಕ್ಕೆ ಕಾರಣವಾದದ್ದು ಉಂಟು ಅದನ್ನು ತೆಗೆದು ಹಾಕುವ ತನಕ ನಿಮ್ಮೊಂದಿಗೆ ನಾನು ಬರುವುದಿಲ್ಲ ಎಂದು (ಯೆಹೋ. 7:13). ಶಾಪಕ್ಕೆ ಕಾರಣವಾದ ಆಕಾನನು ದೇವರಿಗೆ ಮೀಸಲಾಗಿಟ್ಟ ವಸ್ತುಗಳನ್ನು ಕದ್ದು ತೆಗೆದುಕೊಂಡ ಕಾರಣ ಎಲ್ಲಾ ಇಸ್ರಾಯೇಲ್ಯರು ದ್ರೋಹಿಗಳಾಗಿ ದೇವರ ಕೋಪಕ್ಕೆ ತುತ್ತಾದರು. ನಾವು ದೇವರ ಚಿತ್ತವಿಲ್ಲದ ಕಾರ್ಯಗಳನ್ನು ಮಾಡುವಾಗ, ದೇವರಿಗೆ ಇಷ್ಟವಿಲ್ಲದ ಸ್ಥಳಕ್ಕೆ ಹೋಗುವಾಗ ಆತನು ನಮ್ಮೊಂದಿಗೆ ಬರುವುದಿಲ್ಲ. ಪ್ರಿಯ ಸ್ನೇಹಿತನೇ 1 ನಿಮಿಷ ಯೋಚಿಸು **"ನೀನು ಕರ್ತನೊಡನೆ ನಡೆಯುವುದಕ್ಕೆ ಸಾಧ್ಯವಾಗದ ರೀತಿಯಲ್ಲಿರುವ ಆ ಕಾರಣವೇನೆಂದು ತಿಳಿಯುವುದಕ್ಕೆ ಮನಸ್ಸು ಮಾಡುವೆನು"**. ನಾವು ದೇವರೊಂದಿಗೆ ನಡೆಯಬೇಕಾದರೆ ಕೆಲವೊಂದು ಕಾರ್ಯಗಳನ್ನು ಮಾಡಬೇಕಾಗಿದೆ. ಅದನ್ನು ವಿವರವಾಗಿ ಧ್ಯಾನಿಸೋಣವೆ?.

ದೇವರು ನಿಮ್ಮನ್ನು ಆಶೀರ್ವದಿಸಲಿ.

ಮುಂದುವರಿಯುವದು.....

**– ಪಾ॥ ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

# ಇಲ್ಲಿಗೆ ಏರಿ ಬಾ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ಹೊಸವರ್ಷದ ಶುಭಾಶಯಗಳು.

(ಪ್ರಕ. 4:1) ಪತ್ಮೋಸ್ ದ್ವೀಪಕ್ಕೆ ಗಡಿಪಾರಾಗಿ ದಟ್ಟವಾದ ಅರಣ್ಯದಲ್ಲಿ ಕ್ರೂರವಾದ ಮೃಗಗಳಿಂದ ಸತ್ತ ಹೆಣದ ಎಲುಬುಗಳಿಂದ ಕೂಡಿದ ಕತ್ತಲೆಯ ಭಯಾನಕತೆಯ ಸ್ಥಳದಲ್ಲಿ ಒಬ್ಬ ಮನುಷ್ಯನು ಕೂಡ ತಿರುಗಾಡದೆ ಇರುವ ಅಸಹಾಯಕತೆಯಲ್ಲಿರುವಾಗ ಚರಿತ್ರೆ ಕೂಡ ಹೇಳುತ್ತದೆ ಈ ದ್ವೀಪದಲ್ಲಿ ಬದುಕುಳಿದವರೇ ಇಲ್ಲ ಎಂದು ಮರಣಕ್ಕೆ ಇನ್ನೇನೋ ಒಂದು ಗೇಣು ಅಂತರವಿದ್ದಾಗ ಈ ಪರಿಸ್ಥಿತಿಯಲ್ಲಿಯೂ ಕೂಡಾ ಭಯಪಡದೆ ನನ್ನ ಈ ಸನ್ನಿವೇಶದಲ್ಲಿ ಉತ್ತರಿಸಲು ಒಂದು ಪರಲೋಕವೇ ಇದೇ ಎಂದು ತಿಳಿದ ಯೋಹಾನನು ಆ ದ್ವೀಪದಲ್ಲೇ, ದಟ್ಟ ಅಡವಿಯಲ್ಲೇ ಭಯಾನಕತೆಯಲ್ಲೇ, ಕ್ರೂರಮೃಗಗಳ ಮಧ್ಯೆದಲ್ಲೇ, ಬೆಳಕನ್ನು ಕಾಣದ ಕತ್ತಲೆಯಲ್ಲೆ ದೇವರಾತ್ಮವಶನಾಗಿ ಕ್ರಿಸ್ತನ ಸಮ್ಮುಖಕ್ಕೆ ಏರಿ ಬಂದಾಗ ಮುಂದೇ ಆಗಬೇಕಾದವುಗಳನ್ನು ದೇವರು ಯೋಹಾನನಿಗೆ ಸ್ಪಷ್ಟವಾಗಿ ತೋರಿಸಿದನು.

ಪ್ರಿಯರೇ ಇವತ್ತು ಆತನ ಸಮ್ಮುಖಕ್ಕೆ ಏರಿ ಬರುವುದಕ್ಕೆ ನೀವು ಮನಸ್ಸು ಮಾಡುವುದಾದರೆ ಆ ದೇವರ ಮಹಿಮೆಯನ್ನು ಕಾಣುತ್ತೀರಿ. ದೇವರು ನಿಮ್ಮೊಂದಿಗೆ ತನ್ನ ಹೃದಯವನ್ನು ಹಂಚಿಕೊಳ್ಳುತ್ತಾನೆ. ಆತನು ನಿಮಗಾಗಿ ಇಟ್ಟ ಮೇಲುಗಳನ್ನು ತೋರಿಸುತ್ತಾನೆ. **"ಸದ್ಭಕ್ತರಿಗೋಸ್ಕರ ನೀನು ಇಟ್ಟುಕೊಂಡಿರುವ ಮೇಲೂ ಆಶ್ರಿತರಿಗೋಸ್ಕರ ನೀನು ಎಲ್ಲರ ಮುಂದೆ ಮಾಡಿದ ಉಪಕಾರಗಳೂ ಎಷ್ಟೋ ವಿಶೇಷವಾಗಿವೆ"** (ಕೀರ್ತ 31:19) (ಧರ್ಮೋ. 34:1–4). ಓದುವಾಗ ಮೋಶೆ ನೆಬೋ ಪರ್ವತಕ್ಕೆ ಹೋಗಿ ಪಿಸ್ಗಾ ಎಂಬ ಬೆಟ್ಟದ ಶಿಖರವನ್ನು ಹತ್ತಿದಾಗ ದೇವರು ಅಬ್ರಹಾಮ್, ಇಸಾಕ್, ಯಾಕೋಬಿಗೆ ವಾಗ್ದಾನ ಮಾಡಿದ ಕಾನಾನ್ ದೇಶವನ್ನು ಆ ಫಲವತ್ತಾದ ಪ್ರದೇಶವನ್ನು ತೋರಿಸಿದನು. ಮೋಶೆ ಅಂದು ಕಂಡ ಪ್ರಕಾರ ಇಂದು ಹತ್ತುವವರಿಗೆ ದೇವರ ಉನ್ನತಿ, ದರ್ಶನ, ಮಹಿಮೆ, ಬಲ, ಸೌಂದರ್ಯ, ಐಶ್ವರ್ಯ ಇದೆ. ಅಷ್ಟು ಮಾತ್ರವಲ್ಲ ಅವರು ಫಲವತ್ತತೆಯನ್ನು ಅನುಭವಿಸುತ್ತಾರೆ, ಅಲ್ಲಿ ದರಿದ್ರತೆ, ಸೋರುವಿಕೆ, ಬಾಧೆಗಳು ಇರುವುದಿಲ್ಲ. ದೇವರ ಸಮೃದ್ಧಿಯನ್ನು ಅನುಭವಿಸುತ್ತಾರೆ ದೇವರು ತಾನೇ ನಮ್ಮ ಅನ್ನ ಪಾನಗಳನ್ನು ಆಶೀರ್ವಾದಮಾಡಿ ಐಗುಪ್ತರಿಗೆ ಬರಮಾಡಿದ ವ್ಯಾಧಿಗಳಲ್ಲಿ ಒಂದನ್ನು ಬರಗೊಡಿಸುವುದಿಲ್ಲ.

ಆಶೀರ್ವಾದವು ಕನಸು ಕಾಣುವವರ ಹಿಂದೇ ಬರುವುದಿಲ್ಲ ಕ್ರಿಸ್ತನನ್ನು ಹಿಂಬಾಲಿಸುವವರ ಹಿಂದೇ ಬರುತ್ತದೆ. (ಅನುಸರಿಸಲಿಕ್ಕೆ ಮನಸ್ಸುಳ್ಳವರ ಹಿಂದೆ) ಯೇಸುಸ್ವಾಮಿ ಒಂದು ಸಾಮ್ಯವನ್ನು ಹೇಳಿದನು (ಲೂಕ. 10:25–30). ಇವನು ಯೆಹೂದ್ಯನಾಗಿದ್ದನು ಯೆರುಸಲೇಮನ್ನು ಬಿಟ್ಟು ಘಟ್ಟ ಇಳಿದು ಯೆರಿಕೋವಿಗೆ ಹೋದನು ಅಲ್ಲಿ ಕಳ್ಳರ ಕೈಗೆ ಸಿಕ್ಕಿ ಅರೆ ಜೀವವಾದನು. ಅವನಲ್ಲಿರುವಂಥದೆಲ್ಲವೂ ಸುಲುಕೊಳ್ಳಲ್ಪಟ್ಟಿತ್ತು. ಸಮಾಧಾನ ನಗರವಾದ ಯೆರೂಸಲೇಮನ್ನು ಬಿಟ್ಟು ಶಾಪಗ್ರಸ್ತವಾದ ಯೆರಿಕೋವಿಗೆ ಇಳಿದನು. ನವೊಮಿ ಕುಟುಂಬ ಸಹಿತ ಬರಬಂದ ನಿಮಿತ್ತವಾಗಿ ರೊಟ್ಟಿಸಿಗುವ ಬೇತ್ಲೆಹೇಮನ್ನು ಬಿಟ್ಟು ಶಾಪಗ್ರಸ್ತವಾದ ಮೋವಾಬ್‌ಗೆ ಇಳಿದಳು (ರೂತ. 1:6).

ನೀತಿವಂತರಾದರೋ ದೇವರ ಸನ್ನಿಧಿಯಲ್ಲಿ ಹರ್ಷಿಸುವರು; ಉಲ್ಲಾಸಿಸುವರು, ಆನಂದಧ್ವನಿಮಾಡುವರು (ಕೀರ್ತ. 68:3).

ಆದಿ. 12:19–20 ಅಬ್ರಹಾಮನು ಘೋರಕ್ಷಾಮವಿದ್ದ ನಿಮಿತ್ತವಾಗಿ ಮುಂದುವರಿದು ಪ್ರಯಾಣ ಬೆಳೆಸಬೇಕಾದವನು ಶಾಪಗ್ರಸ್ತವಾದ ಐಗುಪ್ತದೇಶಕ್ಕೆ ಇಳಿದನು. ಲೂಕ. 15:16 ಕಿರಿಯ ಮಗನು ತಂದೆಯ ಮನೆಯನ್ನು ಬಿಟ್ಟು ಶಾಪಗ್ರಸ್ತವಾದ ದೂರ ದೇಶಕ್ಕೆ ಇಳಿದು ಹೋದನು. ಇಲ್ಲಿ ಇವರ್‍ಯಾರಿಗೂ ಕೂಡಾ ಇಳಿದು ಹೋಗಿ ಅಂತ ದೇವರು ಹೇಳಲಿಲ್ಲ. ಸಮಸ್ಯೆ, ಹೋರಾಟ, ಬರಬಂದ ನಿಮಿತ್ತವಾಗಿ ದೇವರ ಆಲೋಚನೆ ಕೇಳದೆ ನಡೆದರು. ಇದರ ನಿಮಿತ್ತವಾಗಿ ನಡೆಯಬಾರದ್ದು ನಡೆದು ಹೋಯಿತು, ಮರಣ ಸಂಭವಿಸಿತ್ತು ಎಲ್ಲಾ ಕಳೆದುಕೊಂಡ ಪರಿಸ್ಥಿತಿಗೆ ಬಂದು ಬಿಟ್ಟರು.

ದೇವರ ಸಮಾಧಾನವನ್ನು ಬಿಟ್ಟು ಸಮಾಧಾನವಿಲ್ಲದ ಸಂಗತಿಗೆ ಇಳಿಯಿತ್ತೋ, ದೇವರ ಆಲೋಚನೆ ಸಿಗುವ ಸಮ್ಮುಖವನ್ನು ಬಿಟ್ಟು, ಆತನ ಚಿತ್ತವನ್ನು ಬಿಟ್ಟು ಚಿತ್ತವಿಲ್ಲದವುಗಳಿಗೆ ಇಳಿಯುವುದಾದರೆ, ಅನರ್ಥಕಗಳು, ಬಾಧೆಗಳು, ದರಿದ್ರತೆಗಳು, ಸೋರುವಿಕೆ, ಅಸಮಾಧಾನ, ಜಗಳಗಳು, ಗಂಡ ಹೆಂಡತಿಯರಲ್ಲಿ ಡೈವೋರ್ಸ್ ಪ್ರಾಬ್ಲಮ್, ಇವೆಲ್ಲವು ಇಳಿದ ತಕ್ಷಣವೇ ಸಂಭವಿಸುತ್ತದೆ.

ಆದರೆ ಕಳ್ಳರ ಕೈಗೆ ಸಿಕ್ಕಿದ ಯೆಹೂದ್ಯನಿಗೆ ಒಳ್ಳೆಯ ಸಮಾರ್ಯನಾದ ಯೇಸುವಿನಿಂದ ಕೃಪೆ ಸಿಕ್ಕತು. ಶಾಪಗ್ರಸ್ತವಾದ ಐಗುಪ್ತಕ್ಕೆ ಇಳಿದ ಅಬ್ರಹಾಮನು ವಾಗ್ದನ ದೇಶದ ಕಾನನ್‌ಗೆ ಏರಿಬಂದನು (ಆದಿ. 13:1). ತನ್ನ ಮಕ್ಕಳನ್ನು ಗಂಡನನ್ನು ಬಲಿತೆಗೆದುಕೊಂಡ ಶಾಪಗ್ರಸ್ತವಾದ ಮೋವಾಬ್‌ನಿಂದ ಸೊಸೆಯಾದ ರೂತಳೊಂದಿಗೆ ಹಿಂದುರಿಗೆ ಬಂದಾಗ ರೂತ. 6:22. ಜವೆಗೋದಿಯ ಸುಗ್ಗಿಯು ಪ್ರಾರಂಭವಾಗಿತ್ತು.

ಲೂಕ. 15:17–24. ತಪ್ಪಿಹೋದ ಮಗನು ಶಾಪಗ್ರಸ್ತವಾದ ದೇಶದಿಂದ ತನ್ನ ತಂದೆಯ ಮನೆಗೆ ಹಿಂತಿರುಗಿ ಬಂದಾಗ–

ಶ್ರೇಷ್ಠವಾದ ನಿಲುವಂಗಿ ಮಹಿಮೆಯ ವಸ್ತ್ರ, ಕೈಗೆ ಉಂಗುರ – ಹೊಸ ಅಧಿಕಾರ, ಜೋಡು ಮೇಡಿಸಿರಿ – ಶುಭಸಮಾಚಾರ

ಕೊಬ್ಬಿದ ಕರು ವೈರಿಯ ಮುಂದೆ ಪ್ರೇಮದೌತಣ ಹಬ್ಬ – ಸಡಗರ ಉಲ್ಲಾಸ – ನೂತನವಾದ ಸ್ತೋತ್ರ ಇವೆಲ್ಲವನ್ನು ಅನುಭವಿಸುವಂತೆ ಮಾಡಿದನು.

ಪ್ರಿಯರೇ ಕಳೆದ ದಿನ ಹೇಗಿತ್ತೋ ಅದು ಬೇಕಾಗಿಲ್ಲ ಅಣೆಕಟ್ಟನ್ನು ದಾಟಿದ ನೀರು ಅತ್ತರೂ ಹಿಂತಿರುಗಿ ಬರಲಿಕ್ಕೆ ಸಾಧ್ಯವಿಲ್ಲ, ಅವುಗಳಿಗಾಗಿ ಕೊರಗಿ ಪ್ರಯೋಜನವಿಲ್ಲ. ನಾವು ನಾಳೆಗಾಗಿ ಚಿಂತೆ ಮಾಡುತ್ತೇವೆ. ಆದರೆ ನಾಳೆ ಅದು ನಮಗಾಗಿ ಚಿಂತೆ ಮಾಡುತ್ತದೆ. ನಾಳೆ ಇರುವುದು ಅದು ನಮಗಾಗಿ ಈ ಮಗನಿಗೆ (ಳಿ) ಏನು ಕೊಡಬೇಕೆಂದು ಅದು ಚಿಂತೆ ಮಾಡುತ್ತದೆ. ಯಾಕಂದರೆ ದೇವರೇ ಅದಕ್ಕೆ ಅಪ್ಪಣೆಕೊಟ್ಟಿದ್ದಾನೆ. ನದಿಗಳು ಮುಂದಕ್ಕೆ ಸಾಗುವವೇ ಹೊರತು ಹಿಂದೆ ಹರಿಯುವುದಿಲ್ಲ; ಅದೇ ರೀತಿ ನಮ್ಮ ಜೀವನವೂ ಕಳೆದು ಹೋದ ಬದುಕಿನ ಬಗ್ಗೆ ಚಿಂತಿಸದೇ ಮುಂದೆ ಹೋಗಬೇಕು. ಈ ಹೊಸ ವರುಷದಲ್ಲಿ ಒಳ್ಳೆಯ ತೀರ್ಮಾನದೊಂದಿಗೆ ಏರಿ ಬರುವುದಾದರೆ **"ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು; ಸಂಜೆಗೆ ದು:ಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು"**. (ಕೀರ್ತ. 30:5)

ಪ್ರಿಯ ದೇವ ಸಭೆಯೇ, ನಾಯಕನೇ, ವಿಶ್ವಾಸಿಯೇ ನಿನಗೆ ಹರ್ಷ ಧ್ವನಿ ಕೇಳಿಸುವುದು. ಏರಿ ಬರುವವರಿಗೆ ಉನ್ನತಿ, ದರ್ಶನ, ಮಹಿಮೆ, ಕೃಪಾವರಗಳು ಇದೆ. ಪ್ರಾರ್ಥನೆಯಲ್ಲಿ, ವಾಕ್ಯ ಧ್ಯಾನದಲ್ಲಿ, ಐಕ್ಯತೆಯಲ್ಲಿ, ಪ್ರೀತಿಯಲ್ಲಿ ಏರಿ ಬನ್ನಿರಿ. ಇವತ್ತು ಪರಲೋಕವು ನಿಮ್ಮನ್ನು ಮಹಿಮೆಪಡಿಸುವುದಕ್ಕೆ, ಆಶೀರ್ವಾದ ಮಾಡುವುದಕ್ಕೆ ಸಿದ್ಧವಾಗಿದೆ. ಹಿಂತಿರುಗಿ ಬಂದ ತಪ್ಪಿ ಹೋದ ಮಗನನ್ನು ಪರಲೋಕ ತಂದೆಯು ಆಶೀರ್ವಾದಿಸಿದ ಹಾಗೆ ನಿಮ್ಮನ್ನು ಹೊಸ ಮಹಿಮಾ ವಸ್ತ್ರದೊಂದಿಗೆ, ಹೊಸ ಅಧಿಕಾರದೊಂದಿಗೆ, ಆತನ ನಾಮದ ಸಾಕ್ಷಿಗಾಗಿ ಅನೇಕ ದೇಶಗಳಿಗೆ, ರಾಜ್ಯಗಳಿಗೆ, ಗ್ರಾಮಗಳಿಗೆ, ರಾಷ್ಟ್ರಗಳಿಗೆ ತನ್ನ ಮಹಿಮೆಯ ಶುಭ ಸಮಾಚಾರವನ್ನು ಹೊತ್ತುಕೊಂಡು ಹೋಗುವ ಸಾಧನವಾಗಿ ಮಾಡುತ್ತಾನೆ. ನೀನು ಹೋಗುವ ಸ್ಥಳದಲ್ಲೆಲ್ಲಾ ವೈರಿಯ ಸಮಸ್ತ ಬಲವನ್ನು ತುಳಿದು ಅವುಗಳ ಮುಂದೆ ಕರ್ತನು ಸಂತೋಷಿಸುವಂತೆ ಮಾಡುತ್ತಾನೆ. ಕೊಟ್ಟಿಗೆಯಿಂದ ಬಿಟ್ಟ ಕರುಗಳಂತೆ ನೀವು ಹೊರಟು ಬಂದು ಕುಣಿದಾಡುವಿರಿ ನೀವು ಹೋದಲೆಲ್ಲಾ ಸಂತೋಷವುಂಟಾಗುತ್ತದೆ. ದೇವರ ಆ ಮಹಿಮೆ, ಆ ಸ್ಥಳ, ಮನೆ, ಗ್ರಾಮ, ಪಟ್ಟಣ, ದೇಶ, ರಾಷ್ಟ್ರವನ್ನು ವ್ಯಾಪರಿಸಿಕೊಳ್ಳುತ್ತದೆ. ಏರಿ ಬರುವವರನ್ನು ಪರಲೋಕವು ತನ್ನ ಮಹಿಮೆಗೆ ನಡೆಸುತ್ತದೆ. ಎಲ್ಲಿ ದೇವರ ಮಹಿಮೆ ಇದೆಯೋ ಅಲ್ಲಿ ವೈರಿಯ ಶಕ್ತಿ ಅಡಗಲ್ಪಡುತ್ತದೆ.

ಯಾರು ಪ್ರಾರ್ಥಿಸುತ್ತಾರೋ ಅವರು ಸೈತಾನನಿಗೆ ಸಮಾಧಿ ಮಾಡುತ್ತಾರೆ.

ಸಭೆಯೇ, ವಿಶ್ವಾಸಿಯೇ, ನಾಯಕನೇ ಆತನ ಸಮ್ಮುಖದಲ್ಲಿ ಎದ್ದೇಳು. ದೇಶವನ್ನು ಅಧಿಕಾರಿಗಳ ಕೈಯಲ್ಲಿ ಕೊಡಲಿಲ್ಲ, ಪ್ರಾರ್ಥಿಸುವಂತ ನಿನ್ನ ಕೈಯಲ್ಲಿ ಕೊಟ್ಟಿದ್ದಾನೆ. ಇವತ್ತು ದೇಶವನ್ನು ಆಳುವವರಾಗಿದ್ದೇವೆ ಹೊರತು ಆಳುಗಳಲ್ಲ. ಆಶೀರ್ವದಿಸುವ ಬೀಗದ ಕೈಯನ್ನು ಪ್ರಾರ್ಥಿಸುವಂತಹ ದೇವ ಮಕ್ಕಳ ಕೈಯಲ್ಲಿ ಕೊಟ್ಟಿದ್ದಾನೆ. ಇವರ ಮೂಲಕವಾಗಿ ಪರಲೋಕದ ಭಂಡಾರ ತೆರೆಯಲ್ಪಟ್ಟು ಒದಗಬೇಕಾದವುಗಳು ಒದಗಿಸಲ್ಪಡುತ್ತದೆ. ಯಾಕಂದರೆ, ಕರ್ತನಲ್ಲಿ ಬಂಧಿಸಲ್ಪಡದ ಸಂಪನ್ಮೂಲಗಳಿವೆ. ದೇವರನ್ನು ದೃಷ್ಟಿಸುವ ಕಣ್ಣುಗಳು ಅಸಾಧ್ಯವಾದವುಗಳನ್ನು ಸಾಧ್ಯವಾಗುವುದನ್ನು ಕಾಣುತ್ತವೆ (ದಾನಿ 6:9–22). ಆದರೆ ನಾವು ಎಲ್ಲಿದ್ದೇವೆಂಬುದು ಬಹಳ ಮುಖ್ಯವಾಗಿದೆ. ನೀವು ಪ್ರಾರ್ಥನೆ ಕೋಣೆಯಲ್ಲಿದ್ದರೆ ಜಯಶಾಲಿಯಾಗಿ ಹೊರ ಬರುತ್ತೀರಿ.

ಕರ್ತನು ತಾನೇ ನಿಮ್ಮೆಲ್ಲರನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ಆತನು ನಮ್ಮನ್ನು ಜೀವದಿಂದುಳಿಸಿ ನಮ್ಮ ಕಾಲುಗಳನ್ನು ಜಾರದಂತೆ ಕಾಪಾಡಿದನು
(ಕೀರ್ತ. 66:9).

# ಯಾವ ಆತ್ಮನ ಅಧೀನದಲ್ಲಿದ್ದೀರಿ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

5) **ಅವಿಧೇಯತೆಯ ಆತ್ಮ (ಎಫೆ. 2:2):** ದ್ರಾಕ್ಷಾರಸವನ್ನು ಕುಡಿಯಬಾರದೆಂದು ರೆಬೆಕ್ಕಳ ಮಕ್ಕಳಿಗೆ ದೇವರು ನೇರವಾದ ಆಜ್ಞೆಯನ್ನೇನೂ ಕೊಟ್ಟಿರಲಿಲ್ಲ. ಅವರ ಅಜ್ಜಂದಿರು ಅವರ ತಂದೆಗಳಿಗೆ ಆಜ್ಞಾಪಿಸಿದ್ದರು. ಮತ್ತು ಅವರ ತಂದೆಗಳು ಇವರಿಗೆ ಆಜ್ಞಾಪಿಸಿದರೂ, ಅದನ್ನು ಅವರು ಅನುಸರಿಸುತ್ತಿದ್ದರು. ಆಗ ಶೋಧನೆಯ ಸಮಯವು ಬಂದಿತು. ಒಂದು ಉತ್ತಮವಾದ ಸ್ಥಳ ಆಲಯ, ಕುಡಿಯಲು ಉತ್ತಮವಾದ ಪಾನ–ದ್ರಾಕ್ಷಾರಸದಿಂದ ತುಂಬಿದ ಕೊಡಗಳು, ಆರೋಗ್ಯವಾದ ವ್ಯಕ್ತಿ ಕರ್ತನ ಪ್ರವಾದಿಯಾದ ಯೆರೆಮಿಯನು ಇಲ್ಲಿ ನೋಡುವಾಗ, ಅವರು ತಮ್ಮ ಜೀವಿತದಲ್ಲಿ ಎಂದಿಗೂ ಸೇವಿಸಲಾರದೆ ಇದ್ದಂತಹ ರುಚಿ, ನೋಡಿರದಂತಹ ದ್ರಾಕ್ಷರಸವು ಕರ್ತನ ಆಲಯದಲ್ಲಿ ನಂಬಲಿಕ್ಕೆ ಯೋಗ್ಯನಾದ ಪ್ರವಾದಿಯಾದ ಯೆರೆಮಿಯನ ಹಸ್ತದಿಂದ ಕೊಡಲ್ಪಡುತ್ತಿತ್ತು. ಆದರೂ ಕೂಡಾ ಅವರಿಗೆ ಕುಡಿಸುವುದಕ್ಕೆ ಯೆರೆಮಿಯನಿಂದ ಆಗದೇ ಹೋಯಿತು. ಅವರು ಅದನ್ನು ಮುಟ್ಟಲೂ ಕೂಡ ಹೋಗಲಿಲ್ಲ. ಯಾಕೆ? ಪ್ರವಾದಿಯು ಹೇಳುವಾಗ ಕರ್ತನ ಆಲಯದಲ್ಲಿ ಅದನ್ನು ಸೇವಿಸಿದ್ದರೆ ಅದೇನು ತಪ್ಪಾಗುತ್ತಿರಲಿಲ್ಲವಲ್ಲ? ಅವರು ಯಾವುದೋ ಒಂದು ಮೂಲೆಯಲ್ಲಿ ತಮ್ಮ ವಿಧೇಯತೆಗೆ ಯಾವುದೇ ಪ್ರಶಂಸಶೆಯಿಲ್ಲದೆ ಜೀವಿಸುತ್ತಿದ್ದರು. ಆದರೆ ಭೂಮಿಯ ಮೇಲೆ ಎಲ್ಲಾ ಕಡೆಗಳಲ್ಲಿಯೂ ನೋಡುವ ಕರ್ತನ ಕಣ್ಣಿಗೆ ಅದು ಮರೆಯಾಗಿರಲಿಲ್ಲ. ಆದರೆ ಅವರ ಈ ನಡತೆಯನ್ನು ಇಡೀ ಲೋಕಕ್ಕೆ ಒಂದು ವ್ಯಕ್ತಿಯನ್ನಾಗಿ ಬಯಲಿಗೆ ತಂದನು (ಯೆರೆ. 3:5).

ಪ್ರಿಯರೇ, ದೇವರ ವಾಕ್ಯಕ್ಕೆ ಅವಿಧೇಯರಾಗಲು ಶೋಧನೆಯು ನೀವು ತಿಳಿಯದಂತಹ ಗಳಿಗೆಯಲ್ಲಿ, ಸ್ಥಳದಲ್ಲಿ ಮತ್ತು ನೀವು ನೆನೆಸದೇ ಇರುವಂತಹ ವ್ಯಕ್ತಿಯು ಮುಖಾಂತರವಾಗಿ ಬರಬಹುದು. ಪ್ರಶಂಸೆಯನ್ನು ಹೊಂದದ ಒಂದು ವಿಷಯಕ್ಕಾಗಿ ಇಷ್ಟೊಂದು ಜಾಗ್ರತೆಯಾಗಿ ನಡೆದುಕೊಳ್ಳುವದು ಕ್ಷುಲ್ಲಕವಾಗಿ ಕಾಣುವದೋ? ಆದರೆ ಲಹೈರೋಯಿಯನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳಿರಿ (ಆದಿ. 16:14). ಅವಿಧೇಯತೆಗೆ ನಾವು ಯಾವುದೇ ನೆವವನ್ನು ಹೇಳಿದರೂ ಕೂಡ ಕರ್ತನು ಅದನ್ನು ಅಂಗೀಕರಿಸಲಾರನು. ಆದ್ದರಿಂದ ಸಕಲ ವಿಷಯಗಳಲ್ಲಿ ವಿಧೇಯರಾಗಿ ನಡೆದು ದೇವರಿಗೆ ಮೆಚ್ಚುಗೆ ಪಾತ್ರ ವಹಿಸುವವರಾಗಿರೋಣ.

6) **ಕುಂದಿದ ಆತ್ಮ :** (ಯೆಶಾ. 61:3). ಯಾವ ದೇವರ ಮಗುವಾದರೂ ಸರಿ ಜೀವನದಲ್ಲಿ ದು:ಖದಿಂದ ಕಷ್ಟಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಆದ್ದರಿಂದ ಯೇಸುವು ಬೂದಿಗೆ ಬದಲಾಗಿ ಶಿರೋಭೂಷಣ, ದು:ಖವಿದ್ದಲ್ಲಿ ಆನಂದ ತೈಲ, ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರವನ್ನು ಕೊಡುವುದಕ್ಕಾಗಿ ಈ ಲೋಕಕ್ಕೆ ಬಂದನು. ಆದರೆ ನಾವು ದು:ಖಿಸುವದರ ಮೂಲಕವಾಗಿ ದೇವರ ಉದ್ದೇಶಗಳನ್ನು ನಮ್ಮ ಜೀವಿತದಲ್ಲಿ ಹಾಳುಮಾಡಿಕೊಳ್ಳುತ್ತೇವಲ್ಲವೇ ನಾವು ನಮ್ಮ ಶಿರೋಭೂಷಣವನ್ನು, ಆನಂದವನ್ನು, ಕುಂದಿದ ಮನಸ್ಸನ್ನು, ಎಸೆಯುದಾದರೆ ದೇವರು ನಮಗೆ ಶಿರೋಭೂಷಣವನ್ನು, ಆನಂದವನ್ನು ಉತ್ಸಾಹವನ್ನು ಕೊಡಲು ಸಿದ್ಧನಾಗಿದ್ದಾನೆ. ನಾವು ಬೂದಿಯನ್ನು, ಕುಂದಿದ ಮನಸ್ಸನ್ನು ಗಟ್ಟಿಯಾಗಿ ಹಿಡಿದುಕೊಂಡು ದೇವರಿಂದ ಸಮಾಧಾನವನ್ನು ಅನೇಕ ಸಾರಿ ಹೊಂದದೇ ಹೋಗುತ್ತೀರಿ.

ಆದ್ದರಿಂದ "ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ" (1 ಥೆಸ. 5:18). ಕ್ರೈಸ್ತರು ಕುಂದಿದ ಆತ್ಮಕ್ಕೆ ಸ್ತೋತ್ರವನ್ನು ಹೊದಿಸಬೇಕು. ನಿಮ್ಮಿಂದ ಕುಂದಿದ ಆತ್ಮವು ಹೊರಟು ಹೋಗಲು ಸ್ತೋತ್ರಗೀತೆಯನ್ನು ಧರಿಸಿಕೊಳ್ಳಿರಿ. ಇದು ನೀವು ನಿಮ್ಮ ಮುಖವನ್ನು ತೊಳೆದು ಕೊಂಡು ನಗುಮುಖದೊಂದಿಗೆ ಕೃತಜ್ಞತಾಸ್ತುತಿ ಗೀತೆಯನ್ನು ಹಾಡುವ ಸಮಯ.

7) **ಪ್ರಾಪಂಚಿಕ ಆತ್ಮ (1 ಕೊರಿ. 2:12):** ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೇ ದೇವರು ನಮಗೆ ಉಚಿತವಾಗಿ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನು ಹೊಂದಿದೆವು. ದೇವರಿಂದ ವರವಾಗಿ ಹೊಂದಿದ ಸಂಗತಿಗಳನ್ನು ತಿಳಿದುಕೊಳ್ಳದಂತೆ ಇಹಲೋಕ ಸಂಬಂಧವಾದ ಸಂಗತಿಗಳು ಅನೇಕ ಕ್ರೈಸ್ತರ ಜೀವಿತದಲ್ಲಿ ಅಡ್ಡವಾಗಿ ಬರುತ್ತದೆ. ನೀವು ದೇವರನ್ನು, ಧನವನ್ನು ಸೇವಿಸಲಾರಿರಿ. ನಾವು ನಮ್ಮ ಯಜಮಾನನನ್ನು ಮೊದಲು ಆರಿಸಿಕೊಂಡು ನಂತರ ಆತನಿಗೆ ನಂಬಿಗಸ್ತರಾದ ಗುಲಾಮರಾಗಿರಬೇಕು. ಅನೇಕಾನೇಕ ಕ್ರೈಸ್ತರು ಹಣಕ್ಕೆ ನಂಬಿಗಸ್ತ ಗುಲಾಮರಾಗಿ ಹೋಗಿದ್ದಾರೆ. ಅವರು ತಮ್ಮ ಮನಸ್ಸನ್ನು ಪ್ರಾಪಂಚಿಕವಾದ ಚಿಂತೆಗೆ ಒಳಪಡಿಸಿರುತ್ತಾರೆ. ಆದರೆ ದೇವರು ಅಂತಹವರಿಗೆ ಹೇಳುವುದೇನಂದರೆ ಬುದ್ಧಿಹೀನನು ನೀನು.

ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

ಯೆಹೋವನು ತನ್ನ ಸೇವಕರ ಪ್ರಾಣವನ್ನು ವಿಮೋಚಿಸುತ್ತಾನೆ.
(ಕೀರ್ತ 34:22).

# ಸರ್ವೆಸ್ವರ್ ದೇವಾನ್ ಸಂಸಾರ್ ರಚ್ಲೊ.

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಖುನಿ**

ಸರ್ವೆಸ್ವರ್ ದೇವಾನ್ ಎದೆನ್ ಬಾಗಿಂತ್ ಥಾವ್ನ್ ಭಾಯ್ರ್ ಘಾಲ್ತಚ್ ಆದಾಂವ್ ಆನಿಂ ಎವ್ ಸ್ವ ಭುಂಯ್ಚೆರ್ ವಸ್ತಿ ಕರ್ತಾಲಿಂ. ಎದೆನ್ ಬಾಗಿಂತ್ ಜಿವಿತಾಚೊ ರೂಕ್ ಆಸಲ್ಲ್ಯಾನ್ ಕೊಣೆಂಚ್ಚ್ ಥಂಯ್ ಪಾವಿನಾಶೆಂ ಸರ್ವೆಸ್ವರ್ ದೇವಾನ್ ಜಳ್ಚಿ ತಾಲ್ವಾರ್ ಆನಿಂ ಪಾರೊ ದವರ್ಲೊ.

ಎವೆನ್ ಪಯ್ಲ್ಯಾ ಭುರ್ಗ್ಯಾಕ್ ಪ್ರಸುತ್ ಜಾವ್ನ್ ಕಾಯಿನ್ ಮ್ಹಣ್ ನಾಂವ್ ದಿಲೆಂ. ತಸೆಂಚ್ಚ್ ದುಸ್ರ್ಯಾ ಪುತಾಕ್ ಆಬೆಲ್ ಮ್ಹಣ್ ನಾಂವ್ ದಿಲೆಂ. ವ್ರತ್ತೆಂತ್ ಕಾಯಿನ್ ಭುಂಯ್ಕಾರ್ ಜಾಲೊ ಆನಿಂ ಆಬೆಲ್ ಬಕ್ರ್ಯಾ ಹಿಂಡಾಚೊ ಗೊವ್ಳಿ ಜಾಲೊ.

ಆಶೆಂ ಆಸ್ತಾನಾ ಕಾಯಿನಾನ್ ಆಪ್ಲ್ಯಾ ಭುಂಯ್ತ್ ಜಾಲ್ಲ್ಯೊ ಫಳ್ ವಸ್ತು ಸರ್ವೆಸ್ವರ್ ದೇವಾಕ್ ಭೆಟಯ್ಲ್ಯೊ ತಸೆಂಚ್ಚ್ ಆಬೆಲಾನ್ ಆಪ್ಲ್ಯಾ ಹಿಂಡಾಂತ್ಲ್ಯಾ ಬರ್‍ಯಾಂತ್ಲ್ಯಾ ಬರ್‍ಯಾ ಬಕ್ರ್ಯಾ ಪಿಲಾಂಕ್ ಭೆಟಯ್ಲೆಂ. ಆಬೆಲಾಚಿ ಭೆಟವ್ಣಿ ದೇವಾಕ್ ಮಾನ್ವಾಲಿ ಪುಣ್ ಕಾಯಿನಾಚಿ ಭೆಟವ್ಣಿ ಸರ್ವೆಸ್ವರ್ ದೇವಾನ್ ಪಸಂದ್ ಕೆಲಿ ನಾ. ಹ್ಯಾ ನಿಮ್ತಿಂ ಕಾಯಿನ್ ರಾಗಾರ್ ಜಾಲೊ.

ಸರ್ವೆಸ್ವರ್ ದೇವಾನ್ ಕಾಯಿನಾಕ್ ಮ್ಹಳೆಂ "ತುಂ ಕಿತ್ಯಾಕ್ ರಾಗಾರ್ ಜಾಲೊಯ್? ಜಾಗ್ರುತ್ ರಾವ್ ಸೈರಾಣ್ ಸಾಂಬಾಳ್, ರಾಗಾ ನಿಮ್ತಿಂ ಪಾತಕ್ ಭಿತೆರ್ ಸರ್ತಾ ಆನಿಂ ತುಕಾ ಗ್ರಾಸಿತಾ."

ಸರ್ವೆಸ್ವರ್ ದೇವಾಚ್ಯಾ ಉತ್ರಾಂಕ್ ಕಾಯಿನಾನ್ ಗಣ್ಣೆ ಕೆಲೆಂ ನಾ. ಉತ್ರಾಂಕ್ ವಿರೊದ್ ಕಾಯಿನಾನ್ ಆಬೆಲಾಕ್ ಜಿವ್ತಿಂ ಮಾರ್ಲೆಂ!.

ಶೆಕಿಂ ಸರ್ವೆಸ್ವರ್ ದೇವಾನ್ ಕಾಯಿನಾಕ್ ವಿಚಾರ್ಲೆಂ "ತುಜೊ ಭಾವ್ ಆಬೆಲ್ ಖಂಯ್ ಆಸಾ?"

"ಹಾಂವ್ ನೆಣಾ.. ಹಾಂವ್ ಕಿತೆಂ ಮ್ಹಜ್ಯಾ ಭಾವಾಚೊ ರಕ್ಷಕ್‌ಗೀ?" ಕಾಯಿನಾನ್ ಜವಾಬ್ ದಿಲಿ.

"ಹೆಂ ತುವೆಂ ಕಿತೆಂ ಕೆಲೆಂಯ್?" ಸರ್ವೆಸ್ವರ್ ದೇವಾ ಮ್ಹಣಾಲೊ "ತುಜ್ಯಾ ಭಾವಾಚೆಂ ರಗಾತ್ ತುವೆಂ ತಾಕಾ ಜಿವಿಶಿಂ ಮಾರಲ್ಲ್ಯಾ ಸುವಾತೆ ಥಾವ್ನ್ ಮ್ಹಾಕಾ ಬೊಬ್ ಮಾರ್ತಾ...ತುವೆಂ ಆಬೆಲಾಚಿ ಖುನಿ ಕೆಲ್ಲ್ಯಾನ್ ತುಜೆರ್ ಭಹಿಷ್ಕಾರ್ ಆನಿಂ ಶಿರಾಪ್ ಪಡುಂ.... ತುಜೆಂ ದೆಸಾಂತರ್ ಜಾಂವ್"

ಆಶೆಂ ಕಾಯಿನ್ ಸರ್ವೆಸ್ವರ್ ದೇವಾ ಥಾವ್ನ್ ಪಯ್ಸ್ ಸರೊನ್ ಎದೆನಾಚ್ಯಾ ಉದೆಂತಿಚ್ಯಾ "ನೋದ್" ಗಾಂವಾಂತ್ ವ್ಹಸ್ತಿ ಕರುಂಕ್ ಲಾಗ್ಲೊ.

**ತಾರುಂ.**

ಜಾಯ್ತೊ ಕಾಳ್ ಪಾಶಾರ್ ಜಾಲ್ಲ್ಯಾ ಉಪ್ರಾಂತ್ ಭುಂಯ್ಚೆರ್ ಜಾಂಯ್ತೊ ಲೋಕ್ ವಾಡ್ಲೊ. ತಸೆಂಚ್ಚ್ ಮನ್ಶ್ಯಾಚೆಂ ಖೊಟೆಪಣ್‌ಯ್ ವಾಡೊನಂಚ್ಚ್ ಯೆತೆಲೆಂ.

ಭುಂಯ್ಚೆರ್ ಮನ್ಶ್ಯಾಚಿಂ ಬದ್ಲಾವಣ್ ಪಳೆವ್ನ್ ಆಪ್ಣಾನ್ ಮನ್ಶ್ಯಾಕ್ ನಿರ್ಮಾಣ್ ಕೆಲ್ಲ್ಯಾ ಖಾತಿರ್ ಸರ್ವೆಸ್ವರ್ ದೇವ್ ಚುರ್ಚುರ್ಲೊ.

ತೆದ್ನಾ ಭುಂಯ್ಚೆರ್ ದೇವಾಕ್ ಮಾನ್ವಾಲ್ಲೊ ಎಕ್ಲೊ ಅಪ್ವಂತ್ ಮನಿಸ್ ಆಸಲ್ಲೊ ತಾಚೆಂ ನಾಂವ್ "ನೊಯೆ". ಸರ್ವೆಸ್ವರ್ ದೇವಾನ್ ನೊಯೆಕ್ ಸಾಂಗ್ಲೆಂ "ಸಗ್ಳ್ಯಾ ಮನ್ಶಾಕುಳಾಕ್ ಆನಿಂ ಜಿವಿಂಕ್ ಹಾಂವ್ ನಾಸ್ ಕರ್ತಾಲೊಂ! ಫಕತ್ತ್ ತುಂ ಉರ್ತಲೊಯ್ ತ್ಯಾ ದೆಕುನ್ ತುಜೆ ಸಂಗಿಂ ತುಜೆಂ ಕುಟಾಮ್ ಬಾಚಾವ್ ಜಾತೆಲೆಂ." ತಶೆಂ ನೊಯೆಕ್ ಸರ್ವೆಸ್ವರ್ ದೇವಾನ್ ತೀನ್ ಮಾಳಿಯೆಚೆಂ ವ್ಹಡ್ಲೆಂ ಎಕ್ ತಾರುಂ (ಅರ್ಕಾ ಪೇಟ್) ಬಾಂದುಂಕ್ ಸಾಂಗ್ಲೆಂ ತಸೆಂಚ್ಚ್ ಬಾಂದ್ಚಿ ರೀತ್‌ಯ್ ಸಾಂಗ್ಲಿ. ಉಪ್ರಾಂತ್ ಸರ್ವೆಸ್ವರ್ ದೇವ್ ಮ್ಹಣಾಲೊ "ಹಾಂವ್ ವ್ಹಡ್ಲೆಂ ಆವ್ರ್ (ಬುಡ್ತುಗುಲ್) ಧಾಡ್ತಲೊಂ ಆನಿಂ ಮನ್ಶ್ಯಾಕ್ ತಶೆಂ ಮಳ್ಬಾಪಂದಾ ಆಸ್ಚ್ಯಾ ಸರ್ವ್ ಜಿವಿಂಕ್ ನಾಸ್ ಕರ್ತಾಲೊಂ. "ಆನಿಂ ನೊಯೆಕ್ ಫರ್ಮಾಯ್ಲೆಂ "ತುಂ, ತುಜಿ ಸ್ತ್ರಿ, ಪೂತ್ ಆನಿಂ ಸುನಾಂ ಬರಾಬರ್ ಹರ್‍ಯೇಕಾ ವರ್ಗಾಚ್ಯಾ ಸುಕ್ಣ್ಯಾಚಿಂ, ಮನ್ಜಾತಿಚಿಂ ಆನಿಂ ಜಿವ್ದಾಳಿಚಿಂ ಎಕೇಕ್ ಜೊಡಿ (ದಾದ್ಲಿ ಆನಿಂ ಬಾಯ್ಲಿ) ತಾರ್ವಾಂತ್ ವಚೊಂ. ತಾಂಕಾಂ ಆನಿಂ ತುಮ್ಕಾಂ ಜಾಯ್ ಪುರ್ತೆಂ ಖಾಣ್ ದಾಸ್ತಾನ್ ಕರ್. ಆನಿಂ ಸಾತ್ ದಿಸಾನಿಂ ಹಾಂವ್ ಶಿರಾಂಧಾರಿಚೊ ಪಾವ್ಸ್ ಧಾಡ್ತಲೊಂ ಆನಿಂ ಹೊ ಪಾವ್ಸ್ ಚಾಳೀಸ್ ದೀಸ್ ಪರ್ಯಾಂತ್ ಒತ್ತಲೊ ತೆದ್ನಾ ಹಾಂವೆಂ ರಚಲ್ಲ್ಯೊ ಜೀವಿ ನಿರ್ನಾಸ್ ಜಾತೆಲ್ಯೊ" ಅಶೆಂ ಸರ್ವೆಸ್ವರ್ ದೇವಾನ್ ಫರ್ಮಾಯಿಲ್ಲ್ಯಾ ಬರಿಂಚ್ಚ್ ನೊಯೆನ್ ಸಗ್ಳೆಂ ತಯಾರ್ ಕೆಲೆಂ.

(ನೊಯೆ=ಗೂಣ್ ಜಾಂವ್ಚೆಂ ವ ಉಪಶಮನ್)

ಮುಂದುವರಿಯುವದು......

**ಬರಯ್ಣಾರ್: ಜೆಸುದಾಸ್**
(ಡೇವಿಡ್ ಲುವಿಸ್ ತಲ್ಲರ್)

---

**ನಗೆ ಹನಿ**

* ಅತ್ತೆ: (ಊಟ ಮಾಡುವಾಗ) ಅಬ್ಬಾ! ಅನ್ನದಲ್ಲಿ ಕಲ್ಲುಇದೆ. ದೇವರು ಎರಡು ಕಣ್ಣುಗಳನ್ನು ಕೊಟ್ಟಿದ್ದಾನೆ. ಸರಿಯಾಗಿ ಕಲ್ಲು ಹೆಕ್ಕುವುದಕ್ಕಾಗುವುದಿಲ್ಲವೆ?
  ಸೊಸೆ: ದೇವರು ಮೂವತ್ತೆರಡು ಹಲ್ಲುಗಳನ್ನೂ ಕೊಟ್ಟಿದ್ದಾನೆ. ಕಲ್ಲುಗಳನ್ನಾದರೂ ಜಗಿದು ತಿನ್ನಬಹುದಲ್ಲ!

ನಾನು ಯೆಹೋವನು ಸನ್ನಿಧಿಯಲ್ಲಿ ಬೇಡಿಕೊಳ್ಳಲು ಆತನು ಸದುತ್ತರವನ್ನು ಕೊಟ್ಟು ಎಲ್ಲಾ ಭೀತಿಯಿಂದ ನನ್ನನ್ನು ತಪ್ಪಿಸಿದನು. (ಕೀರ್ತ 34:4).

# ಪವಿತ್ರಾತ್ಮನ ದೀಕ್ಷಾಸ್ನಾನ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಪವಿತ್ರಾತ್ಮನ ಸ್ನಾನ ಎಂದರೇನು**

ಪವಿತ್ರಾತ್ಮನ ದೀಕ್ಷಸ್ನಾನದ ಕುರಿತಾಗಿ ಮೊದಲು ಸ್ನಾನಿಕನಾದ ಯೋಹಾನನಿಂದ ತಿಳಿಸಲ್ಪಟ್ಟಿತು. (ಮತ್ತಾ. 3:11, ಮಾರ್ಕ. 1:8, ಲೂಕ. 3:16).

ಯೋಹಾನನು, ಈ ಸ್ನಾನವು ನೀರಿನಿಂದ ಅಥವಾ ನೀರಿನಲ್ಲಿ ಆಗಿದೆ ಆದರೆ ಯೇಸುವು ವಿಶ್ವಾಸಿಗಳನ್ನು ಪವಿತ್ರಾತ್ಮದ ಬೆಂಕಿಯಿಂದ ಸ್ನಾನ ದೀಕ್ಷೆ ಕೊಡುವವನು ಎಂದು ಹೇಳಿದನು. ನೀರಿನಿಂದ ಸ್ನಾನ ಮಾಡಿಸಲು ಬೋಧಕನು ವಿಶ್ವಾಸಿಯನ್ನು ನೀರಿನಲ್ಲಿ ಅಥವಾ ನೀರಿನಲ್ಲಿ ಸ್ನಾನ ದೀಕ್ಷೆ ಮಾಡುವವನು. ಆದರೆ ಪವಿತ್ರಾತ್ಮನ ಸ್ನಾನಕ್ಕಾಗಿ ಯೇಸುವು ತಾನೇ ವಿಶ್ವಾಸಿಯನ್ನು ಪವಿತ್ರಾತ್ಮನಿಂದ ಸ್ನಾನ ಮಾಡಿಸುವನು. ಯೇಸುವು, ಅ.ಕೃ. 1:5ರಲ್ಲಿರುವ ಯೋಹಾನನ ನೀರಿನ ದೀಕ್ಷಾಸ್ನಾನಕ್ಕೂ, ಶಿಷ್ಯರ ಮೇಲೆ ಇಳಿದು ಬಂದ ಪವಿತ್ರಾತ್ಮನ ಸ್ನಾನಕ್ಕೂ, ಇರುವ ವ್ಯತ್ಯಾಸವನ್ನು ತಿಳಿಸುತ್ತಾನೆ. ಪವಿತ್ರಾತ್ಮನು ಇಳಿದು ಬರುವ ಸಮಯವನ್ನು, ಮತ್ತು ಅವರ ಮೇಲೆ ಬಂದಾಗ ಅವರು ಮತ್ತೆ ಬಲಹೊಂದುವರು ಎಂದು ವಿವರಿಸಿ ಹೇಳಿದನು. ಮತ್ತು (ಅ.ಕೃ. 1:8). ಅ.ಕೃ. 1:4 ಮತ್ತು ಲೂಕ. 24:49 ರಲ್ಲಿ, ಯೇಸುವು ತನ್ನ ಶಿಷ್ಯರಿಗೆ ಕಾದುಕೊಂಡಿರಲು ಹೇಳಿದನು.

ಶಿಷ್ಯರು ಕಾದಿದ್ದರು ಮತ್ತು ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಸ್ನಾನವನ್ನು ಪಡೆದುಕೊಂಡರು (ಅ.ಕೃ.2:1–4). ಅವರು ಆತ್ಮನ ಶಕ್ತಿಯ ಮೂಲಕವಾಗಿ, ವಿವಿಧ ಭಾಷೆಗಳನ್ನಾಡಲು ಪ್ರಾರಂಭಿಸಿದರು. ನಂತರ ಪವಿತ್ರಾತ್ಮನ ಶಕ್ತಿ ಮತ್ತು ಬಲವನ್ನು ಅಪೋಸ್ತಲರು ಮತ್ತು ಡೀಕನ್ನರು, ಆದಿಸಭೆಗಳನ್ನು ಕಟ್ಟಲು ಉಪಯೋಗಿಸಿಕೊಂಡರು (ಅ.ಕೃ. ಅಧ್ಯಾಯ 3–9). ಹೊಸ ಒಡಂಬಡಿಕೆಯುದ್ದಕ್ಕೂ ನಾವು ವಿಶೇಷ ವರವನ್ನು ಮತ್ತು ಬಲವನ್ನು ಪವಿತ್ರಾತ್ಮನಿಂದ ಪಡೆದುಕೊಂಡವರ ಬಗ್ಗೆ ಓದುತ್ತೇವೆ (1ನೇ ಕೊರಿಂಥ, ಅಧ್ಯಾಯಗಳ 12–14, 2ನೇ ಕೊರಿಂಥ 12–12, 1ನೇ ತಿಮೋ. 4:14, 2ನೇ ತಿಮೋ. 1:6).

ಪ್ರಶ್ನೆ ಏನೆಂದರೆ ಪವಿತ್ರಾತ್ಮನ ಶಕ್ತಿ ಮತ್ತು ವಿಶೇಷ ವರಗಳು ಈ ದಿನಗಳಲ್ಲೂ ನಮಗೆ ಲಭ್ಯವಾಗುವುದೇ? ಇವುಗಳು ಲಭಿಸುವುದಾದರೆ, ಯಾವಾಗ ಮತ್ತು ಹೇಗೆ ಇವುಗಳನ್ನು ಪಡೆದುಕೊಳ್ಳಬಹುದು?

**ಪವಿತ್ರಾತ್ಮನ ಶಕ್ತಿಯ ಅನುಭವಗಳು :**

ಪವಿತ್ರಾತ್ಮನು ಎಲ್ಲಾವಿಶ್ವಾಸಿಗಳಲ್ಲಿರುವನೆಂದು ಸತ್ಯವೇದವು ಸ್ಪಷ್ಟವಾಗಿ ಭೋದಿಸುತ್ತದೆ. ರೋಮಾ. 8:9, 1ನೇ ಕೊರಿ. 6:19, ಗಲಾ. 4:6. ಆದರೆ ಆತನು ಬೇರೆ ಬೇರೆ ವ್ಯಕ್ತಿಗಳಲ್ಲಿ, ಬೇರೆ ಬೇರೆ ರೀತಿಯಾಗಿ ಕಾರ್ಯ ಪ್ರವರ್ತನಾಗಿರಬಹುದು. ಸ್ನಾನಿಕನಾದ ಯೋಹಾನನು, ತನ್ನ ತಾಯಿಯ ಗರ್ಭದಿಂದಲೇ, ಪವಿತ್ರಾತ್ಮಭರಿತನಾದನು (ಲೂಕ. 1:15, 41–44). ಯೇಸುವು ನೀರಿನಿಂದ ಸ್ನಾನ ಮಾಡಿಸಿಕೊಂಡ ಕೂಡಲೇ, ಪವಿತ್ರಾತ್ಮನು ಪರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು. ಮಾರ್ಕ. 1:10, ಯೋಹಾ. 1:32–33. ಯೇಸುವು ಈ ಲೋಕದಲ್ಲಿನ ತನ್ನ ಜೀವಿತಕಾಲದಲ್ಲಿ ತನ್ನ ಹನ್ನೆರಡು ಮಂದಿ ಶಿಷ್ಯರಿಗಲ್ಲದೆ, ಇನ್ನು ಎಪ್ಪತ್ತೆರಡು ಇತರೇ ಶಿಷ್ಯರಿಗೂ, ರೋಗಗಳನ್ನು ವಾಸಿ ಮಾಡುವುದಕ್ಕೂ, ದೆವ್ವಗಳನ್ನು ಓಡಿಸುವುದಕ್ಕೂ, ಬಲವನ್ನು ಮತ್ತು ಅಧಿಕಾರವನ್ನು ಕೊಟ್ಟನು. ಲೂಕ. 9:1–2, 10:1,9, 17–19. ಆಮೇಲೆ ಅವರಿಗೆ ಪವಿತ್ರಾತ್ಮನು ಅವರೊಡನೆ ಇರುವುದಲ್ಲದೇ, ಅವರೊಳಗೂ ಇರುವನು ಎಂದು ವಾಗ್ದಾನ ಮಾಡಿದನು (ಯೋಹಾ. 14:16–17). ಪಂಚಾಶತ್ತಮ ದಿನಕ್ಕೆ ಮೊದಲು ಯೇಸುವು ಆಗಲೇ ತನ್ನ ಶಿಷ್ಯರ ಮೇಲೆ ಊದಿ, ಪವಿತ್ರಾತ್ಮನನ್ನು ಸ್ವೀಕರಿಸಿರಿ ಎಂದು ಹೇಳಿದನು (ಯೋಹಾ. 20:22). ಆದರೆ ಅದೇ ಶಿಷ್ಯರಿಗೆ ಪವಿತ್ರಾತ್ಮ ವರವು ಬಲವಾಗಿ ದೊರೆಯುವಂತೆ ಪವಿತ್ರಾತ್ಮನ ದೀಕ್ಷಾಸ್ನಾನಕ್ಕಾಗಿ ಕಾದಿರುವಂತೆ ಹೇಳಿದನು (ಲೂಕ. 24:49, ಅ.ಕೃ. 1:4). ಅ.ಕೃ. 2ನೇ ಅಧ್ಯಾಯದಲ್ಲಿ ತಿಳಿಸಿದಂತೆ, ಅವರು ಪವಿತ್ರಾತ್ಮ ವರವನ್ನು ಸ್ವೀಕರಿಸಿದ ದಿನದಿಂದ ಬಲ ಮತ್ತು ಶಕ್ತಿ ಬಂದು, ಹೊಸ ಸಭಾ ಯುಗವು ಪ್ರಾರಂಭಗೊಂಡಿತು. ಅವರು ಎಲ್ಲೆಲ್ಲಿಯೂ ಹೋಗಿ, ಬೋಧಿಸುತ್ತಾ ಅವರಿಗೆ ನೀರಿನಿಂದ ಸ್ನಾನ ಮಾಡಿಸಿದರು ಮತ್ತು ಅವರನ್ನು ಪವಿತ್ರಾತ್ಮನ ಶಕ್ತಿ ಮತ್ತು ವಿಶೇಷ ವರ ದೊರಕಿಸಿಕೊಳ್ಳುವಂತೆ, ಪ್ರೋತ್ಸಾಹಿಸುತ್ತಿದ್ದರು. (ಅ.ಕೃ. 8:14–17, 9:17, 19:1–7, 1ನೇ ಕೊರಿ. 12:8–10).

ಪರಿಶುದ್ಧಾತ್ಮನಿಂದ ಸ್ನಾನ ಹೊಂದುವುದರ ಅನುಭವಗಳನ್ನು ವರ್ಣಿಸಲು, ಅಪೋಸ್ತಲರ ಕೃತ್ಯಗಳಲ್ಲಿ ಗ್ರೀಕ್ ಭಾಷೆಯ ಆವೃತ್ತಿಯಲ್ಲಿ ಅನೇಕ ಗ್ರೀಕ್ ಪದಗಳಿವೆ. ನಾವು ಈಗಾಗಲೇ "ಪರಿಶುದ್ಧಾತ್ಮನಿಂದ ದೀಕ್ಷಾಸ್ನಾನ" ಎಂಬ ಮಾತನ್ನು (ಅ.ಕೃ. 1:15, 11:16) "ಪಡಕೊಳ್ಳುವ ಶಕ್ತಿ" (ಅ.ಕೃ. 1:8) ಮತ್ತು "ಪವಿತ್ರಾತ್ಮನ ಬರುವಿಕೆ" (ಅ.ಕೃ. 1:8, 8:16, 10:44, 11:15, 19:6). ಇನ್ನು ಕೆಲವು ಪದಪುಂಜಗಳಿದ್ದು "ಸುರಿಸಲ್ಪಡುವಿಕೆ" (ಅ.ಕೃ. 10:45) ಮತ್ತು ಪವಿತ್ರಾತ್ಮನನ್ನು ಪಡೆದುಕೊಳ್ಳುವಿಕೆ (ಅ.ಕೃ. 8:15, 10:47, 19:2). ಲೂಕ. 9:1–2, 10:9, 17–19 ರಲ್ಲಿ ಶಕ್ತಿಯನ್ನು ವರವನ್ನು ಪಡೆದುಕೊಂಡ ಶಿಷ್ಯರೇ ಮತ್ತು ಆತ್ಮನನ್ನು ಯೋಹಾ. 20:22 ಮತ್ತು ಅ.ಕೃ. 2ನೇ ಅಧ್ಯಾಯದಲ್ಲಿ ಹೇಳಿರುವ ಹಾಗೆ (ಅ. ಕೃ. 4:31 ರಲ್ಲಿ ತುಂಬಿಸಿಕೊಂಡರು. ಹೀಗೆ ನಾವು ನೋಡುವಾಗ, ಬೇರೆ ಬೇರೆ ಅನುಭವಗಳಿಗೆ ಒಂದೇ ಹೆಸರಿಸಬಹುದು. ಒಂದು ಅನುಭವಕ್ಕೆ ಎರಡು ಅಥವಾ ಮೂರು ಬೇರೆ ಹೆಸರುಗಳನ್ನು ಕೊಡಬಹುದು.

ಇದಲ್ಲದೇ, ಇದೇ ಅನುಭವಗಳು, ಅ.ಕೃ.ದಲ್ಲಿ ಬೇರೆ ಕಾಲಗಳಲ್ಲಿ ಬೇರೆ ವಿಧವಾಗಿ ಉಂಟಾದವು. ಅನುಭವಗಳು ಕೆಲವು ಸಾರಿ, ಈ ರೀತಿ ಆದವು. (1) ಮಾನಸಾಂತರ ಹೊಂದಿದ ನಂತರ, ಮತ್ತು ಪವಿತ್ರಾತ್ಮನನ್ನು ಯಾವುದೇ ರೀತಿಯಲ್ಲಿ ಪಡೆದುಕೊಂಡ ನಂತರ (ಯೋಹಾ. 20:22, ಅ.ಕೃ. 2:4, 4:31).

2) ಮಾನಸಾಂತರ ಹೊಂದಿದ ಮೇಲೆ ಮತ್ತು ನೀರಿನಿಂದ ದೀಕ್ಷಾಸ್ನಾನ ಪಡೆದ ಕೆಲವು ದಿನಗಳ ನಂತರ

(ಅ.ಕೃ. 8:9–17).

ಯೆಹೋವನಾದರೋ ತನ್ನಲ್ಲಿ ಭಯಭಕ್ತಿವುಳ್ಳವರನ್ನು ಕಟಾಕ್ಷಿಸುತ್ತಾನೆ.

(ಕೀರ್ತ 33:18).

3) ಮಾನಸಾಂತರವಾಗುವಾಗ ಮತ್ತು ನೀರಿನ ದೀಕ್ಷಾಸ್ನಾನಕ್ಕೆ ಮುಂಚಿತವಾಗಿ (ಅ.ಕೃ. 10:44–48).

4) ಮಾನಸಾಂತರ ಆಗುವಾಗ ಮತ್ತು ನೀರಿನ ದೀಕ್ಷಾಸ್ನಾನ ತಕ್ಕೊಂಡ ಕೆಲವೇ ನಿಮಿಷಗಳಲ್ಲಿ (ಅ.ಕೃ. 19:1–6) ಕೆಲವು ಜನರಿಗೆ, ಅವರ ಮೇಲೆ ಕೈಗಳನ್ನಿಟ್ಟ ಕೂಡಲೇ, ಪವಿತ್ರಾತ್ಮ ಬಂದನು. (ಅ.ಕೃ. 8:17, 9:17, 19:7, 2ನೇ ತಿಮೊ. 1:6 ಮತ್ತು ಇನ್ನು ಕೆಲವರಿಗೆ ಯಾವುದೇ ವಿಶೇಷತೆಯಿಂದ ಕೂಡಿರದ ಸಂದರ್ಭದಲ್ಲಿ ಕೈಯಿಡದಿದ್ದರೂ, ಪವಿತ್ರಾತ್ಮನು ಬಂದನು (ಅ.ಕೃ. 2:4, 4:31, 10:44).

ಆದುದರಿಂದ ವಿವಿಧ ರೀತಿಯಲ್ಲಿ ಪವಿತ್ರಾತ್ಮನು ಬರುವನು ಮತ್ತು ಕಾರ್ಯವನ್ನು ಮಾಡುವನು ಎಂಬುದಾಗಿ ಈ ವಚನಗಳಿಂದ ನಾವು ನೋಡುತ್ತೇವೆ. ಪವಿತ್ರಾತ್ಮನು ಸ್ವತಂತ್ರನು. ನಾವು ಆತನಿಗಾಗಿ ನಮ್ಮ ಸ್ವಂತವಾದಂತ ಕಾನೂನುಗಳನ್ನು ಮಾಡಬಾರದು. ಪವಿತ್ರಾತ್ಮನ ಶಕ್ತಿಯು ನಮ್ಮ ಜೀವಿತದಲ್ಲಿ ಇದೇಯೇ ಎಂಬುವಂತದ್ದು ಮುಖ್ಯವಾದ ಸಂಗತಿಯಾಗಿದೆ. ಪವಿತ್ರಾತ್ಮನ ಶಕ್ತಿಯು ನಮ್ಮ ಜೀವಿತದಲ್ಲಿರುವುದಕ್ಕಾಗಿ ನಾವು ಪ್ರಾರ್ಥಿಸಲೇಬೇಕು (ಅ.ಕೃ. 8:14–17, 9:17). ಪವಿತ್ರಾತ್ಮನು, ಕ್ರೈಸ್ತರ ಜೀವಿತದಲ್ಲಿ ಯಾವ ರೀತಿಯಿಂದಾದರೂ ತನ್ನ ಕಾರ್ಯವನ್ನು ಮಾಡಿದರು ಕೂಡ ಆ ಕಾರ್ಯಕ್ಕಾಗಿ ನಾವು ದೇವರನ್ನು ಕೊಂಡಾಡಬೇಕು ಮತ್ತು ಕೃತಜ್ಞತೆಯನ್ನು ಸಲ್ಲಿಸಬೇಕು.

ಮುಂದುವರೆಯುವುದು...

ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.

# ನೂತನ ಮಾರ್ಗದಲ್ಲಿ ನಡೆಸುವ ದೇವರು

ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಿಯ ವಾಚಕ ಸಹೋದರ ಸಹೋದರಿಯರೆಲ್ಲರಿಗೂ ವಂದನೆಗಳು. ಹಳೆ ವರ್ಷವನ್ನು ಮುಗಿಸಿ ಹೊಸ ವರ್ಷಕ್ಕೆ ಕಾಲಿಡುವಂತೆ ಕರ್ತನಾದ ಯೇಸುಕ್ರಿಸ್ತನು ಕೃಪೆ ತೋರಿಸಿದ್ದಾನೆ. ಕಳೆದಂಥಾ ವರ್ಷದಲ್ಲಿ ಅನೇಕ ಸೋಲು, ನೋವು, ವೇದನೆಯಂಥಾ ಅನೇಕ ಅನುಭವಗಳನ್ನು ದಾಟಿ ಬಂದಿರಬಹುದು. ಕಳವಳಪಡದೆ, ಸೋತು ಹೋಗದೆ, ಮನಗುಂದದೆ ನಿರಾಶರಾಗಿದೆ ದೇವರನ್ನು ದೃಷ್ಟಿಸೋಣ.

ಕರ್ತನಾದ ಯೇಸುಕ್ರಿಸ್ತನು ನಮಗೆ ನೂತನ ವರ್ಷದಲ್ಲಿ ಕೊಡುವಂಥ ನೂತನ ಆಶೀರ್ವಾದಗಳನ್ನು ಧ್ಯಾನಿಸೋಣ.

ನಾನು ನಿನ್ನನ್ನು ಬೆಳಕನ್ನಾಗಿ ಇತರ ಜನಾಂಗಗಳಿಗೆ ಮಾರ್ಪಡಿಸುತ್ತೇನೆ (ಯೆಶಾ. 49:6). ಲೋಕದಲ್ಲಿ ಇಂದು ನಾವು ಕಣ್ಣೆತ್ತಿ ನೋಡುವುದಾದರೆ ದು:ಖ, ನೋವು, ವೇದನೆ, ರೋಗ, ನಿರಾಶೆಗಳಿಂದ ತುಂಬಿ ಯಾವುದೇ ನಿರೀಕ್ಷೆಯಿಲ್ಲದೆ ಜೀವಿಸುತ್ತಿದೆ, ಪ್ರತಿದಿನ ನಿರಾಶರಾಗಿ ಜೀವಿತದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡು ಸಾಯಿತ್ತಿರುವಂತಹ ಅನೇಕ ಜನರನ್ನು ಟಿ.ವಿ. ಮಾಧ್ಯಮಗಳ ಮೂಲಕ ನಾವು ಗಮನಿಸಬಹುದು. ಇಂದು ಲೋಕದಲ್ಲಿ ಜನರಿಗೆ ಜೀವಿತದಲ್ಲಿ ನಿರೀಕ್ಷೆಯಿಲ್ಲದೆ ನಿರಾಶರಾಗಿರುವಂಥ ಜನರ ಮಧ್ಯದಲ್ಲಿ ದೇವರು ನಿನ್ನನ್ನು ಒಂದು ಬೆಳಕನ್ನಾಗಿ ನಿರೀಕ್ಷೆಯುವುಳ್ಳವನ್ನಾಗಿ ಕಳುಹಿಸಲು ಇಷ್ಟಪಡುತ್ತಾನೆ.

a) ಪಾಪಿಗಳಿಗೆ ಸುವಾರ್ತೆ ಸಾರಿ ರಕ್ಷಣೆಯ ಮಾರ್ಗದಲ್ಲಿ ನಡೆಸಲು
b) ರೋಗಿಗಳಿಗಾಗಿ ಪ್ರಾರ್ಥಿಸಿ ಬಿಡುಗಡೆಗೊಳಿಸಲು
c) ಮಾಟ ಮಂತ್ರದ ಬಂಧನದಿಂದ ಜನರನ್ನು ಬಿಡಿಸಲು
d) ಸಮಾಧಾನ ಇಲ್ಲದವರಿಗೆ ಸಮಾಧಾನ ಸಾರಲು
e) ಜನರ ಮುಂದೆ ಜೀವಿಸುವ ದೇವರಿದ್ದಾನೆಂದು ನಿರೂಪಿಸಲು
f) ಜನರನ್ನು ಪಾಪ, ಶಾಪಗಳಿಂದ ಬಿಡಿಸಿ ಆಶೀರ್ವಾದದ ಕಡೆಗೆ ನಡೆಸಲು

1) "ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು" (ಯೆಶಾ. 60:1–2).
2) "ನಾನು ನಿನ್ನನ್ನು ಕಾಪಾಡುತ್ತೇನೆ" (ಯೆಶಾ. 49:8). ಈ ಹೊಸ ವರ್ಷವನ್ನು ಎದುರುಗೊಳ್ಳುವಾಗ ಚಿಂತೆ ದು:ಖಗಳೊಂದಿಗೆ ಎದುರುಗೊಳ್ಳಬೇಡಿ. ಯಾವುದೇ ಸಮಸ್ಯೆ ನಿಮ್ಮ ಮುಂದೆ ಇದ್ದರೂ ಕರ್ತನು ನಿಮ್ಮನ್ನು ಕಾಪಾಡುತ್ತಾನೆ (ಯೆಶಾ. 41:10–14).
3) ನಿನ್ನ ಮುಂದಿರುವ ಬೆಟ್ಟಗಳನ್ನು ನೆಲಸಮ ಮಾಡುತ್ತಾನೆ (ಯೆಶಾ. 49:11). "ಸಾರ್ವಭೌಮನಾದ ಯೆಹೋವನ ಎದುರಿನಲ್ಲಿ ಪರ್ವತಗಳು ಮೇಣದಂತೆ ಕರಗಿಹೋದವು" (ಕೀರ್ತ. 97:5). ನಿನ್ನ ಮೇಲಿರುವ ಕೇಸುಗಳು, ನಿನ್ನ ಆಸ್ತಿ ಸಮಸ್ಯೆ, ನಿನ್ನ ಕೆಲಸದ ಸಮಸ್ಯೆ, ನಿನ್ನ ವ್ಯಾಪಾರದ ಸಮಸ್ಯೆ, ನಿನ್ನ ಕುಟುಂಬ ಸಮಸ್ಯೆ, ನಿನ್ನ ರೋಗ ಸಮಸ್ಯೆ, ಎಲ್ಲವೂ ಇಲ್ಲದ ಹಾಗೆ ದೇವರು ಮಾರ್ಪಡಿಸುವನು (ಪ್ರಕ. 21:5).
4) ನನ್ನ ಜೀವಿತದಲ್ಲಿ ಕರ್ತನು ಕೈ ಎತ್ತುತ್ತಾನೆ, "ನನ್ನ ಧ್ವಜವನ್ನು ಎತ್ತುವೆನು" (ಯೆಶಾ. 49:22). ದೇವರು ದಾವೀದನಿಗೆ ಎಲ್ಲಾ ಕಡೆಯಲ್ಲಿಯೂ ಜಯ ಕೊಟ್ಟನು (2 ಸಮು 5:10).
5) ನಿನ್ನೊಂದಿಗೆ ಹೋರಾಡುವವರೊಂದಿಗೆ ನಾನು ಹೋರಾಡುತ್ತೇನೆ (ಯೆಶಾ. 49:25). ವಿಮೋ. 14:13–14, ನೆಹೆ. 4:19–20, 2 ಪೂರ್ವ 20:14–17 ನಾನು ನಿಮಗಾಗಿ ಯುದ್ಧ ಮಾಡುತ್ತೇನೆಂದು ದೇವರು ಹೇಳಿದ್ದಾನೆ. ಮೊರ್ದೆಕೈ ಶತ್ರುಗಳನ್ನು ಮತ್ತೆ ಕಾಣಲು ಕರ್ತನು ಬಿಡಲಿಲ್ಲ, ದಾನಿಯೇಲನ ವೈರಿಗಳು ನಾಶವಾಗಿ ಹೋದರು (ದಾನಿ. 6:1–4, 10:20–28).
6) ನಿನ್ನ ಮಕ್ಕಳನ್ನು ನಾನು ಉದ್ಧರಿಸುತ್ತೇನೆ (ಯೆಶಾ. 49:25).

ಯೆಹೋವನ ನಾಮವು ಬಲವಾದ ಬುರುಜು ಶಿಷ್ಟನು ಅದರೊಳಕ್ಕೆ ಓಡಿ ಹೋಗಿ ಭದ್ರವಾಗಿರುವನು. (ಜ್ಞಾನೋ 18:10).

ತಂದೆ ತಾಯಿಯವರೇ, ನಿಮ್ಮ ಮಕ್ಕಳ ವಿಷಯದಲ್ಲಿ ಚಿಂತೆ ಮಾಡಬೇಡಿ. ಸೀಟು ಸಿಗುತ್ತೋ ಇಲ್ಲವೋ ಚಿಂತೆಮಾಡಬೇಡಿ, ಕುಡುಕತನ ಹಾಗೂ ಎಲ್ಲಾ ಸಮಸ್ಯೆಗಳಿಂದ ಹೊರಬರುತ್ತಾರೋ ಇಲ್ಲವೋ ಎಂದು ಭಯಪಡಬೇಡಿ ಎಲ್ಲದರಿಂದಲೂ ಬಿಡಿಸಲು ಕರ್ತನು ಶಕ್ತನಾಗಿದ್ದಾನೆ.

ನಿಮ್ಮ ಉತ್ತೇಜನಕ್ಕೆ ಒಂದು ನಡೆದ ಘಟನೆ ಹೇಳುತ್ತೇನೆ, ಕಳೆದ ನವೆಂಬರ್ 2011 ರಲ್ಲಿ ನಾನು ದುಬೈಯಲ್ಲಿದ್ದೆ. ಆಗ ರಾತ್ರಿ ಹಾಗೂ ಮರುದಿನ ನಾನು ಟಿ.ವಿ9ನಲ್ಲಿ ಒಂದು ನ್ಯೂಸ್ ನೋಡಿದೆ "ಹೇಗಿದ ಸುಂದರಿ ಹೇಗಾದಳು" ಎಂದು ಹುಡುಗಿ ಹೆಸರು ಆಶಾ ತಂದೆ ಹೆಸರು ಪ್ರಕಾಶ್ ಎಂದು ಮೂಲತಃ ಬೆಳಗಾಂನವರು. ಪ್ರಕಾಶ್‌ರವರಿಗೆ 3 ಜನ ಮಕ್ಕಳು ಮೊದಲ ಹುಡುಗಿಗೆ ಮದುವೆ ಮಾಡಿ ಕಳುಹಿಸಿದ್ದಾರೆ. ಎರಡನೆಯವಳು ಆಶಾ ಈಕೆಗೂ ಮದುವೆಯಾಗಿತ್ತು. ಮಾನಸಿಕ ಅಸ್ವಸ್ಥತೆಯ ನಿಮಿತ್ತ ವಿವಾಹ ವಿಚ್ಛೇದನೆ ಆಗಬೇಕಾಯಿತು. ಮೂರನೆಯವನು ಹುಡುಗ. 2ನೇ ಮಗಳಾದ ಆಶಾಳ ಮಾನಸಿಕ ಕಾಯಿಲೆಯ ನಿಮಿತ್ತ ಪ್ರಕಾಶ್‌ರವರ ವ್ಯಾಪಾರವೆಲ್ಲ ನಷ್ಟವಾಯಿತು. ಇದ್ದ ಆಸ್ತಿಯನ್ನೆಲ್ಲಾ ಕಳದುಕೊಂಡು ಬಾಡಿಗೆ ಮನೆಯಲ್ಲಿ ವಾಸಿಸಲು ಆರಂಭಿಸಿದರು. ಆಶಾ ತಾಯಿಗೆ ಹೊಡೆಯುತ್ತಿದ್ದಳು. ನೆರೆಕೆರೆಯವರಿಗೆ ತೊಂದರೆ ಕೊಡುತ್ತಿದ್ದಳು. ಹೀಗೆ 8 ಬಾಡಿಗೆ ಮನೆಗಳನ್ನು ಬದಲಾಯಿಸಬೇಕಾಯಿತು. ತಾಯಿ ಮುಂಬಾಯಿಗೆ ಓಡಿ ಹೋದರು, ತಮ್ಮನು ಬಿಟ್ಟು ಹೋದ. ತಂದೆ ಪ್ರಕಾಶ್ ಮಗಳಾದ ಆಶಾಳನ್ನು ಕೆಲಸಕ್ಕೆ ಹೋಗಿ ದುಡಿದು ಮಗಳನ್ನು ಸಾಕುತ್ತಿದ್ದರು. ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕೊನೆಗೆ ಟಿವಿ9 ನ್ಯೂಸ್‌ನಲ್ಲಿ ಹೀಗೆ ಕೊಟ್ಟಿದ್ದರು ಇನ್ನು ಪ್ರಕಾಶ್ ತನ್ನ ಮಗಳನ್ನು ಕಟ್ಟಿ ಏನು ಮಾಡುತ್ತಾರೋ ಯಾರು ಅವರಿಗೆ ಆಶ್ರಯ ಕೊಡುತ್ತಾರೋ ಎಂದು ಅದು ನನ್ನ ಹೃದಯ ಮುಟ್ಟಿತು ಹಾಗೂ ದುಬೈಯಿಂದಲೇ ಟಿವಿ9 ಕಛೇರಿಯನ್ನು ಸಂಪರ್ಕಿಸಿ ಪ್ರಕಾಶ್‌ರವರ ಫೋನ್ ನಂಬರ್ ತೆಗೆದುಕೊಂಡು ನಾವು ಅವರ ಮಗಳಿಗೆ ಆಶ್ರಯ ಕೊಡುವ ಬಗ್ಗೆ ಮಾತನಾಡಿದೆವು. ಹಾಗೆಯೇ ಕಳೆದ ತಿಂಗಳು ಪ್ರಕಾಶ್‌ರವರು ಅವರ ಮಗಳಾದ ಆಶಾಳನ್ನು ಆಶ್ರಮಕ್ಕೆ ಕರೆದುಕೊಂಡು ಬಂದರು. ಈಗ ಸಹೋದರಿ ಆಶಾ ನಮ್ಮ ಆಶ್ರಮದಲ್ಲಿ ಚೇತರಿಸಿಕೊಳ್ಳುತ್ತಾ ಇದ್ದಾಳೆ.

7) ಯಾರು ನಿನ್ನನ್ನು ಕೆಳಗೆ ಬೀಳಿಸಲು ಬರುತ್ತಾರೋ ಅವರ ಮುಂದೆ ದೇವರು ನಿನ್ನನ್ನು ಮೇಲಕ್ಕೆ ಎತ್ತುತ್ತಾನೆ (ಯೆಶಾ. 49:26). "ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ". (ಕೀರ್ತ. 23:5). (ದಾನಿ. 6:4, 10:20–28).

ಕರ್ತನು ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಜ್ಞಾನಕ್ಕಾಗಿಪ್ರಶ್ನೆಗಳು : ನಮ್ಮ ಪ್ರಶ್ನೆ ನಿಮ್ಮ ಉತ್ತರ

1. ನೈಲ್ ನದಿಯ ತವರೂರಾದ ಈಜಿಪ್ಟ್ ರಾಜಧಾನಿ ಯಾವುದು?
2. ಕರ್ನಾಟಕದ ಭತ್ತದ ಕಣಜವೆಂದು ಹೆಸರಾಗಿರುವ ಜಿಲ್ಲೆ ಯಾವುದು?
3. ಷೇಕ್ಸ್‌ಪಿಯರ್ ಬರದ ಕೊನೆಯ ನಾಟಕದ ಹೆಸರೇನು?
4. ಟೆಲಿಫೋನ್ ಕಂಡು ಹಿಡಿದವರು ಯಾರು?
5. ಬಾಸ್ಕೆಟ್ ಬಾಲ್ ಆಟದ ತವರು ದೇಶ ಯಾವುದು?
6. ಭಾರತದ ಯಾವ ರಾಜ್ಯದಲ್ಲಿ ಸೆಣಬನ್ನು ಹೆಚ್ಚಾಗಿ ಬಳಸುತ್ತಾರೆ?
7. ರಂಗನ ತಿಟ್ಟು ಪಕ್ಷಿಧಾಮಕ್ಕೆ ಎಷ್ಟು ಪ್ರಭೇದದ ಪಕ್ಷಿಗಳು ಬರುತ್ತದೆ?
8. ಅತ್ಯಧಿಕವಾಗಿ ದಿನ ಪತ್ರಿಕೆಗಳು ಇರುವ ರಾಜ್ಯಗಳು ಯಾವುದು?
9. ನಿಘಂಟು ತಯಾರಿಸಿದ ಇಂಗ್ಲೀಷ್ ಸಾಹಿತ್ಯಗಾರ ಯಾರು?
10. ಮೌಂಟ್ ಎವರೆಸ್ಟ್ ಏರಿದ ಪ್ರಥಮ ಮಹಿಳೆ ಯಾರು?

**ಡಿಸೆಂಬರ್ ತಿಂಗಳ ಜ್ಞಾನಕ್ಕಾಗಿ ಪ್ರಶ್ನೆಗಳು ಇದರ ಸರಿ ಉತ್ತರಗಳು:**

1. ಅಲೆಗ್ಸಾಂಡರ್ ವೂಲ್ಪಾ, 2. ಹೊಸದೆಲ್ಲಿ, 3. ವೆನಿಜೂಲ, 4. ಜಾನ್. ಎಫ್, ಕೆನಡಿ
5. ವೇಲೆಂಟಿನಾ ತೆರಿಸ್ಕೋವಾ, 6. ಕಬ್ಬಿಣ, 7. ಬ್ರಹ್ಮಾಪುತ್ರ, 8. ಮಾರ್ಟಿನ್ ಹಾರ್ಲಿ, ಮಾಥ್ಯುಸ್,
ಮೈಕಲ್ ಷೈಹೂಕ್ 9. ದಕ್ಷಿಣ ಮಧ್ಯ ಅಮೇರಿಕಾ, 10. ಇಸ್ರೇಲ್, ಪಾಲಿಸ್ತಾಯಿನ್.

ಯೆಹೋವನ ಭಯವು ಜೀವದಾಯಕವು; ಭಯಭಕ್ತಿಯುಳ್ಳವನು ತೃಪ್ತನಾಗಿ ನೆಲೆಗೊಳ್ಳವನು.
(ಜ್ಞಾನೋ 19:23).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅದಕ್ಕೆ ಪಾಪದ ಶಿಕ್ಷೆಯಿಂದ ಬಿಡುಗಡೆ ಹೊಂದಲು ದೇವರ ಕಡೆಗೆ ತಿರುಗಿ ಕೊಳ್ಳುವುದು ಎಂದರೆ ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರ ಬಳಿಯಲ್ಲಿ ಕ್ಷಮೆ ಕೇಳಿ ಆತನ ಮಾರ್ಗದಲ್ಲಿ ನಡೆಯಬೇಕೆಂಬ ತೀರ್ಮಾನದೊಂದಿಗೆ ದೇವರನ್ನು ಸಮೀಪಿಸಬೇಕೆಂಬ ಸತ್ಯವನ್ನು ತಿಳಿಸಿದನು. ಅಂಥವರು ತಂದೆ, ಮಗ, ಪವಿತ್ರಾತ್ಮನ ಹೆಸರಿನಲ್ಲಿ, ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಹೊಂದಬೇಕೆಂಬ ಪ್ರಾಮುಖ್ಯತೆಯನ್ನು ತಿಳಿಸಿದನು. ಅಂತಹ ವ್ಯಕ್ತಿಗಳು ಪವಿತ್ರಾತ್ಮನ ದಾನವೆಂಬ ಅಭಿಷೇಕವನ್ನು ಹೊಂದಿಕೊಳ್ಳಬೇಕೆಂಬ ಸತ್ಯವನ್ನು ತಿಳಿಸಿದನು. ಇಂಥವರು ಅ.ಕೃ. 2:40 ಈ ಕೆಟ್ಟ ಸಂತಾನದಿಂದ ತಪ್ಪಿಸಿಕೊಳ್ಳುವ ಎಚ್ಚರಿಕೆಯನ್ನು ಕೊಟ್ಟನು. ತಪ್ಪಿಸಿಕೊಳ್ಳುವುದೆಂದರೆ ರಕ್ಷಣೆ ಹೊಂದದಿರುವ ಗುಂಪಿನಿಂದ ಬೇರ್ಪಡಿಸಿ ರಕ್ಷಣೆ ಹೊಂದಿದ ಗುಂಪಿನಲ್ಲಿ ಸೇರುವಂಥದಾಗಿದೆ. **"ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು"** (ಅ.ಕೃ. 2:47).

ಉದಾ: ಹಳೆ ಒಡಂಬಡಿಕೆಯ ಇಸ್ರಾಯೇಲರನ್ನು ಅಡವಿಯಲ್ಲಿನ ಸಭೆಯೆಂಬುದಾಗಿ ದೇವರು ಕರೆದಿದ್ದಾನೆ. **"ಸೀನಾಯಿಬೆಟ್ಟದಲ್ಲಿ ತನ್ನೊಡನೆ ಮಾತಾಡಿದ ದೂತನಿಗೂ ನಮ್ಮ ಪಿತೃಗಳಿಗೂ ಅಡವಿಯಲ್ಲಿದ್ದ ಸಭೆಯೊಳಗೆ ಮಧ್ಯಸ್ಥನಾಗಿದ್ದು ಜೀವಕರವಾದ ದೇವೋಕ್ತಿಗಳನ್ನು ಹೊಂದಿ ನಮಗೆ ಕೊಟ್ಟವನು"**(ಅ.ಕೃ. 7:38). ಇಸ್ರಾಯೇಲ್ ಜನರು ಐಗುಪ್ತದ ದಾಸತ್ವದಲ್ಲಿ ಇದ್ದಾಗ ಬಿಡುಗಡೆಗಾಗಿ ದೇವರಿಗೆ ಸತತವಾಗಿ ಮೊರೆಯಿಟ್ಟರು. ವಿಮೋ. 2:23–25 ದೇವರು ಅವರ ಮೊರೆಯನ್ನು ಕೇಳಿ ವಿಮೋ. 3:7–8 ರಲ್ಲಿ ಮೋಶೆಯೊಂದಿಗೆ ಮಾತನಾಡಿ ಅವರನ್ನು ಬಿಡುಗಡೆ ಮಾಡುವ ತನ್ನ ಉದ್ದೇಶವನ್ನು ಮೋಶೆಗೆ ತಿಳಿಸಿದನು. ವಿಮೋ. 7:12 ಅಧ್ಯಯಗಳಲ್ಲಿ ತನ್ನ ಇಸ್ರಾಯೇಲ್ ಜನರ ವಿಷಯದಲ್ಲಿ ಕಠಿಣವಾದ ಫರೋಹ ಹಾಗೂ ಐಗುಪ್ತ ಜನರನ್ನು ಹತ್ತು ಪಿಡುಗುಗಳ ಮೂಲಕ ದಂಡಿಸಿ ವಾಗ್ದಾನದ ದೇಶವಾದಂಥ ಹಾಲೂ ಜೇನು ಹರಿಯುವ ಕಾನಾನ್ ದೇಶಕ್ಕೆ ತನ್ನ ಜನರನ್ನು ನಡೆಸಿದನು. 1 ಕೊರಿ. 10:1–4 ವಾಕ್ಯದಲ್ಲಿ ಐಗುಪ್ತ ದೇಶದ ದಾಸತ್ವದಿಂದ ಬಿಡುಗಡೆ ಹೊಂದಿದ ಇಸ್ರಾಯೇಲ್ ಜನರು ಮೇಘದಲ್ಲಿಯೂ, ಕೆಂಪು ಸಮುದ್ರದಲ್ಲಿಯೂ ದೀಕ್ಷಾಸ್ನಾನ ತೆಗೆದುಕೊಳ್ಳುವುದರ ಮೂಲಕ ಇಸ್ರಾಯೇಲರನ್ನು ಕಾನಾನ್ ದೇಶಕ್ಕೆ ನಡೆಸಿದನು. ಐಗುಪ್ತದೇಶದ ದಾಸತ್ವದಿಂದ ಬಿಡುಗಡೆ ಹೊಂದಿದ ತನ್ನ ಜನರ ಕುರಿತಾಗಿ ದೇವರಿಗೊಂದು ಪದ್ಧತಿಯಿತ್ತು. ಅದೇನೆಂದರೆ **"ಯೆಹೋವನೆಂಬ ನಾನು ಪರಿಶುದ್ಧನಾಗಿದ್ದೇನೆ, ಮತ್ತು ನೀವು ನನ್ನ ಜನರಾಗುವಂತೆ ನಿಮ್ಮನ್ನು ಇತರ ಜನಾಂಗಳಿಂದ ಪ್ರತ್ಯೇಕಿಸಿದ್ದೇನೆ; ಆದದರಿಂದ ನೀವು ನನಗೆ ಮೀಸಲಾಗಿರಬೇಕು"** (ಯಾಜ. 20:26). ಇದೇ ಉದ್ದೇಶವನ್ನು ಈ ಹೊತ್ತು ನಿಜವಾದ ಕ್ರೈಸ್ತ ಸಭೆಗೆ ಇಟ್ಟಿದ್ದಾನೆ. ದೇವರಿಗೆ ನಾವು ಮೀಸಲು ಆದದರಿಂದ ಇತರ ಜನಾಂಗದಿಂದ ನಾವು ಪ್ರತ್ಯೇಕಿಸಿಕೊಂಡು ದೇವರನ್ನು ಆರಾಧಿಸಬೇಕೆಂದು ದೇವರು ಇಷ್ಟಪಡುತ್ತಾನೆ. ಈ ರೀತಿ ಪ್ರತ್ಯೇಕಿಸಿಕೊಂಡ ರಕ್ಷಣೆ ಹೊಂದಿದ ಗುಂಪೇ ಹೊಸ ಒಡಂಬಡಿಕೆಯ ಯೇಸುಕ್ರಿಸ್ತನ ಸಭೆಯಾಗಿದೆ. **"ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು"** (ಅ.ಕೃ. 2:41). ಇಲ್ಲಿ ಪ್ರಾಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ ಪಂಚಶತ್ತಮ ದಿನದಲ್ಲಿ ಸಾವಿರಾರು ಮಂದಿ ಕೂಡಿ ದೇವರ ವಾಕ್ಯವನ್ನು ಕೇಳಿದರು. ದೇವರ ವಾಕ್ಯಕ್ಕೆ ವಿಧೇಯರಾಗಿ ದೀಕ್ಷಾಸ್ನಾನ ತೆಗೆದುಕೊಂಡವರು ಮೂರು ಸಾವಿರ ಜನ ಮಾತ್ರ. ಈ ಮೂರು ಸಾವಿರ ಜನರು ಮೊದಲು ಶಿನಗೋಗಿಗೆ ಹೋಗುವಂತವರಾಗಿದ್ದರು. ಅಲ್ಲಿ ಅವರಿಗೆ ವಾಕ್ಯ ಅರ್ಥವಾಗುತ್ತಿರಲಿಲ್ಲ ಅದಕ್ಕೆ ಉದಾ: ಅ.ಕೃ. 8:30–40 ವಾಕ್ಯವರೆಗೆ ಕಂಚುಕಿಯು ಉತ್ತಮ ಉದಾಹರಣೆಯಾಗಿದ್ದಾನೆ. ಈ ಮೂರು ಸಾವಿರ ಜನರು ಪುನ: ಸಾಂಪ್ರದಾಯಕವಾದ ಶಿನಗೋಗಿಗೆ ಹಿಂದಿರುಗಿ ಹೋಗಲಿಲ್ಲ. ಅದಕ್ಕೆ ಬದಲಾಗಿ ವಾಕ್ಯದ ಗೂಡಾರ್ಥಗಳನ್ನು ತಿಳಿಸುವಂತಹ ಸತ್ಯೋಪದೇಶವನ್ನು ತಿಳುಸುವಂತಹ ಆತ್ಮದಿಂದಲೂ, ಸತ್ಯದಿಂದಲೂ ದೇವರನ್ನು ಆರಾಧಿಸುವಂತಹ, ಪವಿತ್ರಾತ್ಮನನ್ನು ತುಂಬಿ ಪ್ರಾರ್ಥಿಸುವಂತಹ ಮತ್ತು ಒಬ್ಬರಿಗೊಬ್ಬರು ಆತ್ಮೀಕ ವಿಷಯವನ್ನು ಪ್ರೋತ್ಸಾಹಿಸುವಂತಹ, ಆಚರಣೆಗಳಿಲ್ಲದ, ಸಾಂಪ್ರದಾಯವಲ್ಲದ ಹೊಸ ಒಡಂಬಡಿಕೆಯ ರಕ್ಷಣೆ ಹೊಂದಿದ ದೇವರ ಸಭೆಯ ಗುಂಪಿನಲ್ಲಿ ಸೇರಿಬರುತ್ತಿದ್ದರು. **"ಇವರು ಅಪೋಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು"** (ಅ.ಕೃ. 2:42). **"ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು"** (ಅ.ಕೃ. 2:46).

ಮುಂದುವರಿಯುವದು.....

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನಮ್ಮ ಕರ್ತನು ದೊಡ್ಡನು ಪರಾಕ್ರಮಿಯೂ ಆಗಿದ್ದಾನೆ; ಆತನ ಜ್ಞಾನವು ಅಪರಿಮಿತವಾಗಿದೆ.
(ಕೀರ್ತ 147:5).

# ದೇವದರ್ಶನ ಗುಡಾರವೂ ಅಂಗಳವೂ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಹುರಿನಾರಿ ತೆರೆಗಳು : (ವಿ.ಕಾ 27:18; 38:9)**

ಕಂಬಗಳನ್ನು ತಾಮ್ರದ ಬುಡಗಳಲ್ಲಿ ನಿಲ್ಲಿಸಿದ ಮೇಲೆ ಐದು ಮೊಳ ಅಗಲದ ಬಿಳಿ ಪರದೆಯನ್ನು ಕಂಬಗಳ ಮಧ್ಯೆ ಕಟ್ಟುತ್ತಿದ್ದರು. ಈ ತೆರೆಗಳನ್ನು ಹುರಿನಾರಿನ ಬಟ್ಟೆಯಿಂದ ಮಾಡಲಾಗುತ್ತದೆ. ಗುಡಾರದ ಕೆಲಸಕ್ಕೆ ಮೊತ್ತವಾಗಿ 6000 ಚದರ ಅಡಿ ಹುರಿ ನಾರಿನ ಬಟ್ಟೆನ್ನು ಉಪಯೋಗಿಸಲಾಯಿತೆಂದು ಅಂದಾಜಿಸಬಹುದು. ಈ ನಾರು ಬಟ್ಟೆಯು 'ದೇವರ ನೀತಿಯನ್ನೂ' 'ದೇವಜನರ ಸತ್ಕಾರ್ಯಗಳನ್ನೂ' ಸಾರಿಹೇಳುತ್ತದೆ.

**ಹುರಿನಾರನ್ನು ತಯಾರಿಸುವ ವಿಧಾನ :**

ಉತ್ತಮ ಜಾತಿಯ ನಾರುಬಟ್ಟೆಯನ್ನು ಸಿದ್ಧಮಾಡಲು ಏಳು ವರುಷಗಳು ಮಣ್ಣನ್ನು ಹದಮಾಡಿದ ಮೇಲೆ ನಾರು ಸಸಿಯ ಬೀಜವನ್ನು ಬಿತ್ತುತ್ತಾರೆ. ಸೊಗಸಾದ ಸಸಿಗಳು ಮೊಳೆತು ಬರುವಾಗ ಕಳೆಗಳೂ ಅವುಗಳೊಂದಿಗೆ ಬೆಳೆಯುತ್ತವೆ. ಅವುಗಳನ್ನು ನೇಗಿಲಿನಿಂದ ಉಳುವುದರ ಮೂಲಕ ಪುನಃ ಮಣ್ಣಿಗೆ ಸೇರಿಸಲಾಗುತ್ತದೆ. ಇದು ದೇವರ ವಾಕ್ಯವೆಂಬ ಬೀಜವನ್ನು ಸ್ವೀಕರಿಸಲು ಪವಿತ್ರಾತ್ಮನು ನಮ್ಮಲ್ಲಿ ಮಾಡುವ ಕ್ರಿಯೆಗಳಿಗೆ ಹೋಲಿಕೆಯಾಗಿದೆ. ನಾರು ಸಸಿಯ ಬೀಜವು ಉಳುಮೆ ಮಾಡಿದ ಎಲ್ಲಾ ಸ್ಥಳಗಳಲ್ಲಿ ಬೆಳೆಯುತ್ತವೆ. ಇದು ದೇವರ ನೀತಿಯು ಸಾರ್ವತ್ರಿಕವಾಗಿದೆ ಎಂಬುದನ್ನು ಸೂಚಿಸುತ್ತದೆ. ಯೇಸುಕ್ರಿಸ್ತನ ರಕ್ತವು ಯಾವುದೇ ಸ್ಥಳದ ಯಾವುದೇ ಪಾಪವನ್ನು ಪರಿಹರಿಸಲು ಶಕ್ತವಾಗಿದೆ. ಪಕ್ವವಾದ ಸಸಿಯನ್ನು ಕೈಯಿಂದಲೇ ಕಟಾವು ಮಾಡಿ ಅದರಿಂದ ಉತ್ತಮ ಗುಣಮಟ್ಟದ ನಾರು ಸಿಗುವದಕ್ಕಾಗಿ ನೀರಿನಲ್ಲಿ ಅದ್ದಿಡುತ್ತಾರೆ. ಅನೇಕ ದಿನಗಳಾಗುವಾಗ ಇತರೇ ಅಂಶಗಳೆಲ್ಲಾ ಕೊಳೆತು ಹೋಗಿ ನಾರಿನ ಭಾಗ ಮಾತ್ರ ಉಳಿಯುತ್ತವೆ. ಇದು ದೇವರ ಮಕ್ಕಳ ದೀಕ್ಷಾಸ್ನಾನಕ್ಕೆ ಹೋಲಿಕೆಯಾಗಿದೆ. ನಂತರ ನಾರನ್ನು ಶುಚಿಮಾಡಿ ಬಾಚಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಆಗ ಕೆಲವೊಂದು ಉದುರಿಹೋಗಿ ಉತ್ತಮ ನಾರುಗಳು ಮಾತ್ರ ಉಳಿಯುತ್ತವೆ. ಇದು ದೇವರ ಮಕ್ಕಳಿಗಾಗುವ ಪರಿಶೋಧನೆಯನ್ನು ಸೂಚಿಸುತ್ತದೆ. ನಂತರ ಈ ನಾರನ್ನು ಹುರಿ ಹಗ್ಗಕ್ಕಾಗಲೀ ಬಟ್ಟೆಗಾಗಲೀ ಉಪಯೋಗಿಸುತ್ತಾರೆ.

**ಅಂಗಳದ ತೆರೆಯ ಪ್ರಾಧಾನ್ಯತೆ :**

ದೇವದರ್ಶನ ಗುಡಾರವು ತೆರೆಗಳಿಂದ ಸುತ್ತುವರಿಯಲ್ಪಡಲು ಅನೇಕ ಕಾರಣಗಳಿವೆ ಅವುಗಳಲ್ಲಿ ಎರಡನ್ನು ವಿವರಿಸುತ್ತೇನೆ.

1) **ಲೋಕದಿಂದ ಬೇರ್ಪಡಲು –**

ಅಂಗಳಬಾಗಿಲಿನ ಮೂಲಕ ಒಬ್ಬನು ಒಳಗೆ ಪ್ರವೇಶಿಸಿದರೆ ಅವನಿಗೆ ಹೊರಗಿನ ಲೋಕದೊಂದೊಗಿನ ಸಂಬಂಧ ಸಂಪೂರ್ಣವಾಗಿ ಕಡಿದು ಹೋಗುತ್ತದೆ. ಐದು ಮೊಳ ಎತ್ತರದ ಅಂಗಳದ ತೆರೆಯಿಂದಾಗಿ ಹೊರಗೆ ನಡೆಯುವದೇನೆಂದು ಒಳಗೆ ಪ್ರವೇಶಿಸಿದವನಿಗೆ ತಿಳಿಯದು. ಈ ತೆರೆಯು ಲೋಕದಿಂದ ನಮ್ಮನ್ನು ಬೇರ್ಪಡಿಸುತ್ತದೆ. ಕ್ರಿಸ್ತನೆಂಬ ಬಾಗಿಲಿನ ಮೂಲಕ ದೇವರ ಸಭೆಯೊಳಗೆ ಪ್ರವೇಶಿಸಿದ ವ್ಯಕ್ತಿಯು ಲೋಕದೊಂದಿಗೆ ಸಂಪೂರ್ಣ ಬೇರ್ಪಟ್ಟಿರಬೇಕು. **"ಬೇರೆ ಅನೇಕವಾದ ಮಾತುಗಳಿಂದ ಅವನು ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು"**. (ಅ.ಕೃ 2: 40.)

**ನಾವು ಬೇರ್ಪಟ್ಟಿರಬೇಕಾದ ಸಂಗತಿಗಳು –**

1) ಲೋಕದಿಂದ (2ಕೊರಿಂಥ 6: 14–18)
2) ಪಾಪದಿಂದ (1ತಿಮೋಥಿ 6:10; 2ತಿಮೋಥಿ 2:22; 1ಕೊರಿಂಥ 10:14)
3) ಅವಿಶ್ವಾಸಿಗಳಿಂದ (1ಕೊರಿಂಥ 7:39)
4) ಮಿಥ್ಯ ಆರಾಧನೆಯಿಂದ (ಕೀರ್ತನೆ 84:10)
5) ತಪ್ಪಿಹೋದ ಸಹೋದರರಿಂದ (1ಕೊರಿಂಥ 5:11–13)
6) ದುರುಪದೇಶಗಳಿಂದ (ಅ.ಕೃ 20:30; ರೋಮ 16:17; 2ಯೊಹಾನ 9–10)
7) ಧೂಮಪಾನದಿಂದ (ಯೆಶಾಯ 52:11; 2ಕೊರಿಂಥ 6:15–16; 7:1)

**2) ಸಂರಕ್ಷಣೆಗಾಗಿ –**

ಅಂಗಳದೊಳಗೆ ಪ್ರವೇಶಿಸಿದ ವ್ಯಕ್ತಿಯು ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟವನಾಗಿರುವನು. ಈ ತೆರೆಯು ನೀತಿವಂತನನ್ನು ಅನೀತಿವಂತರಿಂದ ಸಂರಕ್ಷಿಸುತ್ತಿತ್ತು. ದೇವರ ಮಕ್ಕಳಾದವರ ಸಂರಕ್ಷಣೆಯ ಸಂಪೂರ್ಣ ಜವಾಬ್ದಾರಿಯು ಕರ್ತನದಾಗಿದೆ. ಒಮ್ಮೆ ಕರ್ತನು ತನ್ನ ಶಿಷ್ಯರೊಂದಿಗೆ ಪ್ರಾರ್ಥನೆಗಾಗಿ ಹೊರಡುವಾಗ ಶಿಷ್ಯರಲ್ಲಿ ಒಬ್ಬನು–ಸ್ವಾಮೀ ಇಗೋ ಇಲ್ಲಿ ಎರಡು ಕತ್ತಿಗಳಿವೆ ಅನ್ನಲು ಆತನು ಅವರಿಗೆ ಅಷ್ಟು ಸಾಕು ಅಂದನು. ಅಂದರೆ ಲೋಕದ ಕತ್ತಿಗಳಾಗಲೀ ಸೈನ್ಯವಾಗಲೀ ಕೊಡುವ ಸಂರಕ್ಷಣೆಗಿಂತ ಮಿಗಿಲಾದ ಸಂರಕ್ಷಣೆಯನ್ನು ನಮ್ಮೊಂದಿಗಿರುವ ಕರ್ತನು ನಮಗೆ ಕೊಡುವನು.

ಮುಂದುವರೆಯುವದು.......

**ಪಾ॥ ಸಜೀ ವರ್ಗೀಸ್**

ಯೆಹೋವನು ದಯೆಯೂ ಕನಿಕರವೂ ಉಳ್ಳವನು ದೀರ್ಘಶಾಂತನೂ ಪ್ರೀತಿಪೂರ್ಣನೂ ಆಗಿದ್ದಾನೆ. (ಕೀರ್ತ 145:8).

ಆರೋಗ್ಯ ಸ್ವರ

# ಆರೋಗ್ಯದ ಬಗ್ಗೆ ದಿನನಿತ್ಯ ಗಮನವಿರಲಿ...

ನಮ್ಮೆಲ್ಲರ ಜೀವನದಲ್ಲಿ ಆರೋಗ್ಯ ಒಂದು ಪ್ರಾಮುಖ್ಯವಾದ ಅಂಶ. ಊಟ, ನಿದ್ರೆ, ಮಲ, ಮೂತ್ರ ಇವಿಷ್ಟು ಸರಿಯಾದ ಕ್ರಮದಲ್ಲಿ ಆದರೆ ಆರೋಗ್ಯ ಮನಸ್ಸು ಚೆನ್ನಾಗಿರುತ್ತದೆ.

**ಭೋಜನವೆಂಬ ಯಜ್ಞ**

* ಊಟದ ಜೊತೆಗೆ ನೀರು, ಹಸಿ ತರಕಾರಿ, ಮೊಸರು (ಮಜ್ಜಿಗೆ) ಸೇವಿಸಲು ಮರೆಯದಿರಿ.
* ಸರಿಯಾಗಿ ತೊಳೆದ ತರಕಾರಿಯನ್ನು ಬಳಸಿ ಗ್ಯಾಸ್ ಉತ್ಪತ್ತಿ ಮಾಡುವ ತರಕಾರಿ, ಬೇಳೆಗಳನ್ನು ಕಡಿಮೆ ಬಳಸಿ.
* ಕಾಫಿ, ಟೀ ಜೊತೆಗೆ ಕೊತ್ತಂಬರಿ, ಜೀರಿಗೆ ಕಷಾಯ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿ.
* ಮುಚ್ಚದೆ ಇಟ್ಟ ಪದಾರ್ಥವನ್ನು ಹಾಳಾಗುವುದೆಂದು ಸೇವಿಸದಿರಿ.
* ಹೆಚ್ಚು ಹುಳಿಬಂದ ನಿನ್ನೆಯ ಪದಾರ್ಥವನ್ನು ಆದಷ್ಟು ದೂರವಿಡಿ.

**ನಿದ್ರೆಯೆಂಬ ಧ್ಯಾನ ಸಮಯ**

* ರಾತ್ರಿ ಬೇಗನೆ ಮಲಗಿ ಬೆಳಿಗ್ಗೆ ಬೇಗ ಏಳುವುದು ಉತ್ತಮ. ಅಸಾಧ್ಯವಾದವರು ರಾತ್ರಿ ಲೇಟಾಗುವ ಹಾಗಿದ್ದರೆ ಮಧ್ಯಾಹ್ನ ಕಟ್ಟುನಿಟ್ಟಾಗಿ ಅರ್ಧಗಂಟೆ ಮಲಗಿ. ಇದರಿಂದ ರಾತ್ರಿಯ ತನಕ ಉಲ್ಲಾಸವಿರುವುದು!
* ಕೆಲಸದ ಒತ್ತಡವಿರುವವರು ಊಟ ಆದಕೂಡಲೇ ಕಣ್ಣುಮುಚ್ಚಿ 10 ನಿಮಿಷವಾದರೂ ವಿರಾಮ ತೆಗೆದುಕೊಂಡರೆ ಹಿತ. ಆದರೆ ಕಣ್ಣುಮುಚ್ಚುವ ಮೊದಲು ತಣ್ಣಗಿನ ಒಂದು ಗ್ಲಾಸ್ ನೀರು ಕುಡಿಯಲು ಮರೆಯದಿರಿ.
* ನಿದ್ರಿಸುವಾಗ ಚಳಿಯ ಪ್ರಕೃತಿಯವರು ರಜಾಯಿ ಒಳಗೆ ಉಟ್ಟು ಹಳತಾದ ವಯಾಲ್ ಸೀರೆಯನ್ನು ಬಳಸಿ ತೃಪ್ತಿಕರ ನಿದ್ದೆ ಬರುವುದು. ಸೆಕೆ ಇರುವವರು 2 ವಯಾಲ್ ಸೀರೆಯನ್ನು ಒಟ್ಟಿಗೆ ಹೊಲಿದು ಬಳಸಿ ನೋಡಿ!
* ಕಣ್ಣು ಉರಿ ಬರುವವರು ಹಾಲಿನ ಕೆನೆಯನ್ನು ಕಣ್ಣಿನ ಮೇಲೆ ಹಾಕಿದರೆ ಸುಖದ ನಿದ್ರೆ ಬರುವುದು. ಹಾಡೆ (ಹೃದಯದ ಆಕಾರದ, ಬಳ್ಳಿಯಲ್ಲಿ ಇರುವ ಎಲೆ) ಸೊಪ್ಪನ್ನು ಜಜ್ಜಿ ಅದರ ದಪ್ಪಗಿನ ರಸವನ್ನು ಒಂದು ಮರದ ಮಣೆಯ ಮೇಲೆ ಚಮಚದಲ್ಲಿ ಹೊಯಿದು ಇಡಿ. ಅದು ಅರ್ಧ ಗಂಟೆಯ ನಂತರ ಎಳಕಿ ಬರುವುದು. ಇದನ್ನು ಕಣ್ಣಿಗೆ ಹಾಕಿಕೊಂಡರೆ ಬಲುಹಿತ. ಪರೀಕ್ಷೆಗೆ ಓದುವ ವೇಳೆ ಮಕ್ಕಳು ಇದನ್ನು ಹೆಚ್ಚಾಗಿ ಬಳಸಬಹುದು.
* ಬೆಳಗ್ಗೆ ಏಳಬೇಕೆಂದಿರುವವರು (ಉದಾಸೀನ ಪ್ರವೃತ್ತಿಯವರಾಗಿದ್ದರೆ) ಎದ್ದ ಕೂಡಲೇ ಮನೆಯ ಹೊರಗೆ ಬಂದು ಬಿಡಬೇಕು. ಒಮ್ಮೆ ಹೊರಗೆ ಬಂದರೆ ನಿದ್ದೆ ಹಾರಿ ಹೋಗುತ್ತದೆ.

**ದೇಹಬಾಧೆಯಿಂದ ಮುಕ್ತಿ**

* ನೀರು ಸರಿ ಪ್ರಮಾಣದಲ್ಲಿ ಕುಡಿಯಲು ಸೇರದಿರುವವರು ನೀರಿಗೆ ಏಲಕ್ಕಿ ಲವಂಗ ಈ ತರದ ದ್ರವ್ಯಗಳನ್ನು ಸೇರಿಸಿದಾಗ ರುಚಿಯೆನಿಸುವುದು. ನೀರಿಗೆ ಜೀರಿಗೆ, ಕರಿಮೆಣಸು, ಲವಂಗ, ಕಾಚಿ ಹೀಗೆ ಹಲವು ಸಾಂಬಾರ ಪದಾರ್ಥಗಳನ್ನು ಪರಿಮಳಕ್ಕಾಗಿ ಬಳಸಬಹುದು. ಸರಿಯಾಗಿ ನೀರು ಕುಡಿಯುವವರ ಮಲವು ಸಿಲಿಂಡರ್‌ನ ರೀತಿಯಲ್ಲಿ ವಿಸರ್ಜನೆಯಾಗುತ್ತದೆ. ಇದು ಆರೋಗ್ಯದ ಲಕ್ಷಣ.
* ಇನ್ನು ಉರಿ ಉರಿಯಾಗಿ ನೀರಿನಂಶದಿಂದ ಕೂಡಿದ್ದ ಮಲವಿಸರ್ಜನೆಯಾಗುವವರು ಮಸಾಲೆ ಪದಾರ್ಥಗಳನ್ನು ಹೆಚ್ಚು ತಿನ್ನುತ್ತಾರೆ ಎಂದರ್ಥ. ಬೇಯಿಸಿದ ಹಸಿರುಕಾಳು, ದೊಡ್ಡ ತರಕಾರಿ ಹೋಳುಗಳು, ಹಾಲು ಸೇವಿಸಿದಾಗ ಮಲ ಸರಿಯಾದ ರೀತಿಯಲ್ಲಿ ವಿಸರ್ಜನೆಯಾಗುತ್ತದೆ.
* ಗಟ್ಟಿಯಾಗಿ ಉಂಡೆ ಉಂಡೆಯಾಗಿ ಮಲವಿಸರ್ಜನೆಯಾಗುವವರು ನಾರಿನಂಶವನ್ನು ಹೆಚ್ಚಾಗಿ ತಿನ್ನಬೇಕು. ನೀರು ಧಾರಳವಾಗಿ ಸೇವಿಸಬೇಕು. ನಿತ್ಯವೂ ರಾತ್ರಿ ಬಾಳೆಹಣ್ಣನ್ನು ತಿನ್ನುವುದರಿಂದ ಮಲ ಸಡಿಲವಾಗಿ ವಿಸರ್ಜನೆಯಾಗುತ್ತದೆ. ದೇಹ ಸಮತೋಲನದಲ್ಲಿ ಇರುತ್ತದೆ. ಮಕ್ಕಳಿಗೆ ಬಟಾಣಿ, ಜೋಳ ಕೊಡುವಾಗ ಜಜ್ಜಿ ಕೊಡಬೇಕು. ಇಲ್ಲವಾದಲ್ಲಿ ಕರಗುವುದಿಲ್ಲ.
* ಇನ್ನು ಹೊಟ್ಟೆಕಟ್ಟಿದಂತಾಗಿ ಮಲವಿಸರ್ಜನೆ ಮಾಡಬೇಕೆಂದು ಎನಿಸಿದರೂ ಮಾಡಲು ಸಾಧ್ಯವಿಲ್ಲದವರು ಸರಿಯಾಗಿ ಹೊತ್ತು ಹೊತ್ತಿಗೆ ಆಹಾರ ಸೇವಿಸಿ, ಮೇಲೆ ಹೇಳಿದ ಎಲ್ಲಾ ಒಳ್ಳೆಯ ವಿಧಾನವನ್ನು ಅನುಸರಿಸಬೇಕು. ಜೊತೆಗೆ ಸಾಂಬಾರ (ಕೊತ್ತಂಬರಿ) ನೀರಲ್ಲಿ ನೆನೆಸಿ ರಾತ್ರಿ ಮತ್ತು ಬೆಳಿಗ್ಗೆ ಅದನ್ನು ಕುಡಿಯಬೇಕು. ಬಿಸಿಬಿಸಿಯಾಗಿ ಕುಡಿಯಬೇಕು.
* ಹೊಟ್ಟೆ ಉಬ್ಬರಿಸಿ ತಡೆಯಲಾಗದ ವೇದನೆಯಾದಾಗ ಇಂಗು ಹಾಕಿದ ಮಜ್ಜಿಗೆ ಕುಡಿಯಬೇಕು. ಅತಿಯಾಗಿ ಶಕ್ತಿ ಹಾಕಿ ಮಲವಿಸರ್ಜನೆ ಮಾಡಬಾರದು. ಬಿಸಿಬಿಸಿಯಾದ ಹಾಲಿಗೆ ಬೆಣ್ಣೆಹಾಕಿ ಕುಡಿದಾಗಲೂ ಮಲ ವಿಸರ್ಜನೆಯಾಗುತ್ತದೆ. ಅಲ್ಲದೆ ಶಕ್ತಿ ಹಾಕಿದಾಗ ಗುದದ್ವಾರ ಒಡೆದು ರಕ್ತ ಕೂಡ ಬರುವ ಸಾಧ್ಯತೆಗಳಿವೆ. ಅದನ್ನು ವಾಸಿಮಾಡಲು ಬಲು ಕಷ್ಟ. ಇದಕ್ಕೆ ಅಜ್ಜಿ ಹೇಳಿದ ಮದ್ದೆಂದರೆ ಸಮಪ್ರಮಾಣದಲ್ಲಿ ತುಪ್ಪ, ಕಲ್ಲುಸಕ್ಕರೆ ಪುಡಿ, ಒಣದ್ರಾಕ್ಷಿಯನ್ನು ಮಿಶ್ರಮಾಡಿ ಒಂದು ಡಬ್ಬದಲ್ಲಿ ತುಂಬಿಡಬೇಕು. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚವನ್ನು ಸೇವಿಸಿ ನೀರು ಕುಡಿಯಬೇಕು. ಹೀಗೆ 3 ತಿಂಗಳು ಮಾಡಿದಾಗ ವಾಸಿಯಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಅದೆಷ್ಟು ಸತ್ಯ ಅಲ್ಲವೇ!

– ಸಂಗ್ರಹ.

ಯೆಹೋವನೇ ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವ ಸ್ಥಾನವು ನನಗೆ ಇಷ್ಟ.
(ಕೀರ್ತ 26:8).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಜನವರಿ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

**ನಮ್ಮ ವಿಳಾಸ :**
**ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,**
**ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115**
**ಕರ್ನಾಟಕ, ಭಾರತ.**
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ವಿಶ್ವಾಸದ ಮನೆ, ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115,**
**ಕರ್ನಾಟಕ, ಭಾರತ.** Ph: (0820) 2589070, 2002781
E-mial: dgmofficial@gmail.com

# ಪುನರ್‌ಸ್ಥಾಪನೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಯೌವನಸ್ಥರ ಸ್ವರ

ಕ್ರಿಸ್ತನಲ್ಲಿ ಪ್ರಿಯ ಯೌವನಸ್ಥ-ಯೌವನಸ್ಥೆಯರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು ಮತ್ತೊಮ್ಮೆ ನಿಮ್ಮೆಲ್ಲರನ್ನು ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ಸಂಧಿಸುವಂತೆ ಕರ್ತನು ಕೊಟ್ಟ ಕೃಪೆಗಾಗಿ ಸ್ತೋತ್ರ!

ಕ್ರಿಸ್ತನಲ್ಲಿ ನನ್ನ ಪ್ರಿಯರೇ, ನಾವು ಕಳೆದ ಸಂಚಿಕೆಯಲ್ಲಿ ಧ್ಯಾನಿಸಿದಂತೆ ನನ್ನ, ನಮ್ಮ ಮತ್ತು ದೇವರ ನಡುವಿನ ಅನ್ಯೋನ್ಯತೆ ಪ್ರೀತಿಯನ್ನು ತಿಳಿದುಕೊಳ್ಳುವಂತೆ, ಅದನ್ನು ಅರ್ಥಮಾಡಿಕೊಳ್ಳುವಂತೆ ನನ್ನೊಂದಿಗೆ, ನಮ್ಮೊಂದಿಗೆ ದೇವರು ಮಾತಾಡಿದ್ದಾನೆ, ಮಾತನಾಡುವಾತನಾಗಿದ್ದಾನೆಂದು ನಾನು ದೃಢವಾಗಿ ನಂಬಿದ್ದೇನೆ.

ದೇವರ ವಾಕ್ಯ **"ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ"** (ಪ್ರಕ. 2:4). ಹೇಳುವ ಪ್ರಕಾರ ನಮ್ಮ ಮೊದಲ ಪ್ರೀತಿಯು ಕುರಿತು ನಾವು ತಿರುಗಿ ನೋಡುವುದಾದರೆ ನಾವು ಕ್ರಿಸ್ತನಲ್ಲಿ ಬಂದ ಮೊದಲ ದಿನಗಳಲ್ಲಿ ಇದ್ದಂತಹ ವೈರಾಗ್ಯ, ಆಸಕ್ತಿ, ಪ್ರೀತಿ, ದಯೆ, ಕರುಣೆ ಇಂದು ನಮ್ಮಲ್ಲಿ ಎಷ್ಟರ ಮಟ್ಟಿಗಿದೆ ಎಂದು ನಮ್ಮನ್ನೇ ನಾವು ಪ್ರಶ್ನಿಸಬೇಕಾಗಿದೆ (?) **"ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ; ಪರರ ಸುಖದು:ಖಗಳಲ್ಲಿ ಸೇರುವವರಾಗಿರಿ; ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ"**. ದೇವರ ವಾಕ್ಯ ಹೇಳುವ ಪ್ರಕಾರ ನಾವು ಕಡೆಯವರೆಗೂ ಒಬ್ಬರನ್ನೊಬ್ಬರು ಪ್ರೀತಿಸುವವರಾಗಿರಬೇಕು. ನಮ್ಮ ಪ್ರೀತಿ ದೇವರೊಂದಿಗೆ ಯಥಾರ್ಥವಾಗಿದ್ದಾಗ ಮಾತ್ರ ನಾವು ಇತರರನ್ನು ಯಥಾರ್ಥವಾಗಿ ಪ್ರೀತಿಸಲು ಸಾಧ್ಯ.

ಯೋಬನ ಜೀವಿತವನ್ನು ನಾವು ನೋಡುವಾಗ **"ಆಗ ಯೆಹೋವನು ಸೈತಾನನಿಗೆ -ನನ್ನ ದಾಸನಾದ ಯೋಬನ ಮೇಲೆ ಗಮನವಿಟ್ಟೆಯಾ? ಅವನಿಗೆ ಸಮಾನನು ಭೂಲೋಕದಲ್ಲಿ ಎಲ್ಲಿಯೂ ಸಿಕ್ಕುವದಿಲ್ಲ; ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದನ್ನು ನಿರಾಕರಿಸುತ್ತಾ ನಿರ್ದೋಷಿಯೂ, ಯಥಾರ್ಥಚಿತ್ತನೂ ಆಗಿದ್ದಾನೆ"** (ಯೋಬ. 2:3). ಈ ವಾಕ್ಯವನ್ನು ನೋಡುವಾಗ ದೇವರು ಯೋಬನ ಜೀವಿತವನ್ನು ನೋಡಿ, ಯೋಬನ ಯಥಾರ್ಥ ಪ್ರೀತಿಯನ್ನು ಮೆಚ್ಚುವುದನ್ನು ನೋಡುತ್ತೇವೆ. ಯೋಬನನ್ನು ಮರಣಾವಸ್ಥೆಗೆ ತರುವ ತನಕ ಸೈತಾನನು ಪೀಡಿಸಿ, ಬಾಧಿಸಿದರೂ, ಯೋಬನ ಹೆಂಡತಿ ದೇವರನ್ನು ದೂಷಿಸಿದರೂ, ದೇವರೊಂದಿಗಿನ ಯೋಬನ ಪ್ರೀತಿ ತಣ್ಣಗಾಗಲಿಲ್ಲ.

ಇವತ್ತು ನಮ್ಮ ಸ್ಥಿತಿ ಹೇಗಿದೆ. ನಮ್ಮ ಜೀವಿತದಲ್ಲಿನ ಕಷ್ಟಗಳು, ವೇದನೆಗಳು, ನೋವುಗಳು ನಮ್ಮನ್ನು ದೇವರೊಂದಿಗೆ ಅಗಲಿಸುತ್ತಾ ಬಂದಿದೆಯೋ; ಇನ್ನೂ ಹೆಚ್ಚಾಗಿ ಆತನನ್ನು ಆತುಕೊಳ್ಳುವಂತ ದ್ದಾಗಿದೆಯೋ, ದೇವರ ಪ್ರೀತಿಯನ್ನು ಮನುಷ್ಯರ ಪ್ರೀತಿಗೆ ಹೋಲಿಸಲು ಸಾಧ್ಯವಿಲ್ಲ. ಉದಾಹರಣೆಯಾಗಿ ನನ್ನ ತಾಯಿಯ ಕಾಲಿನಲ್ಲಿ ಆದಂತಹ ಗಾಯದ ಕುರಿತಾಗಿ ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದಾಗ ಯಾರ ಸಾಂತ್ವನವು ಅವರಿಗೆ ಸಂತೈಸುವಿಕೆಯನ್ನು ನೀಡದಿರುವಾಗ ಅವರು ಕೇಳಿದ ಪ್ರಶ್ನೆ?, ನನ್ನ ನೋವನ್ನು ಯಾರು ಹೊತ್ತುಕೊಳ್ಳಲು ಸಾಧ್ಯ? ನನ್ನ ದೇವರು ಮಾತ್ರ ಅದನ್ನು ಹೊತ್ತುಕೊಳ್ಳಬಲ್ಲರು. ಹೌದು ಪ್ರಿಯ ದೇವ ಜನವೇ ನಮ್ಮ ನೋವನ್ನು ಯೇಸು ಮಾತ್ರ ಹೊತ್ತುಕೊಳ್ಳಲು ಸಾಧ್ಯ. ಆತನು ಮನುಷ್ಯರಿಗೆ ಅಸಾಧ್ಯವಾದದ್ದನ್ನು ಸಾಧ್ಯ ಮಾಡಲು ಶಕ್ತನಾಗಿರುವ ದೇವರಾಗಿದ್ದಾನೆ. ನಮ್ಮ ಮನಸ್ಸಿನ ನೋವನ್ನು ನಾವು ಹಂಚಿಕೊಳ್ಳಬಹುದು, ನಮಗೆ ಸ್ವಲ್ಪ ಮಟ್ಟಿಗೆ ಸಂತೈಸುವಿಕೆ ಸಮಾಧಾನವು ಸಹ ಬರಬಹುದು. ಆದರೆ ಶಾಶ್ವತವಾದ ಪರಿಹಾರವು ಯೇಸು ಕ್ರಿಸ್ತನಿಂದ ಮಾತ್ರ ಸಾಧ್ಯವಾಗಿದೆ.

ದೇವರ ವಾಕ್ಯ ಹೇಳುವ ಪ್ರಕಾರ ನೀವು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ದೇವರ ರಾಜ್ಯವನ್ನು ಸೇರಲಾರಿರಿ. ಉದಾಹರಣೆ: ನಮ್ಮ ಸಭೆಯ 3 ವರ್ಷದ ಮಗುವಿನಲ್ಲಿ ನಿನಗೆ ನಿನ್ನ ಮಮ್ಮಿ ಇಷ್ಟನಾ? ಅಥವಾ ಡ್ಯಾಡಿ ಇಷ್ಟನಾ ಎಂದು ಕೇಳಿದಾಗ ಮಗು ಹೇಳಿದ ಉತ್ತರ-ನನಗೆ ಯೇಸಪ್ಪ ಇಷ್ಟ. ಇಲ್ಲಿ ಮಗುವಿನ ಮನಸ್ಸಿನ ಆ ಮುಗ್ಧತೆ ಹೇಗಿದೆ ಅಂದರೆ ನನ್ನ ತಂದೆ ತಾಯಿಗಿಂತಲೂ ದೇವರು ಶ್ರೇಷ್ಠ ಎಂಬುವುದನ್ನು ಆ ಮುಗ್ಧ ಮನಸ್ಸಿನಿಂದ ನಾವು ತಿಳಿಯಬಹುದು. ಆ ರೀತಿಯಾಗಿ ನಾವು ನಮ್ಮ ಡ್ಯಾಡಿ ಯೇಸುವನ್ನು ಪ್ರೀತಿಸುತ್ತಿದ್ದೇವಾ? ಯೇಸುವನ್ನು ಪ್ರೀತಿಸುತ್ತೇನೆಂದು ಹೇಳುವ ನೀನು ಇಂದು ದೇವರೊಂದಿಗೆ ಪ್ರತಿದಿನ ಮಾತನಾಡುತ್ತಿದ್ದೀಯೋ?. ಇಂದು ನಿನ್ನನ್ನು ನೀನು ಸರಿಪಡಿಸಿಕೋ, ದೇವರೊಂದಿಗಿನ ನಿನ್ನ ಸಂಬಂಧವನ್ನು ಸರಿಪಡಿಸಿಕೋ, ದೇವರಿಗೆ ಮೊದಲ ಸ್ಥಾನವನ್ನು ನೀನು ನಿನ್ನ ಜೀವಿತದಲ್ಲಿ ನೀಡುವುದಾದರೆ ಆತನು ನಿನ್ನ ಪ್ರಾರ್ಥನೆಗೆ ಉತ್ತರ ಕೊಡುವಾತನಾಗಿದ್ದಾನೆ.

ಈ ಹೊಸ ವರ್ಷದಲ್ಲಿ ದೇವರು ನಿಮ್ಮೆಲ್ಲರ ಜೀವಿತದಲ್ಲಿ ಒಂದು ಪುನರ್‌ಸ್ಥಾಪನೆಯನ್ನು ಮಾಡಲಿ ಎಂದು ಬಯಸುತ್ತೇನೆ.

ದೇವರು ನಿಮ್ಮನ್ನು ಆಶೀರ್ವದಿಸಿ ಮೊದಲ ಪ್ರೀತಿಯಲ್ಲಿ ನಿಮ್ಮನ್ನು ನಡೆಸಲಿ.

ಮುಂದುವರೆಯುವುದು................

**ಪಾ|| ಜಾನ್ ಸ್ಟೀಫನ್ ಮೊಂತೇರೋ**
ಬೇತೇಲ್ ಚರ್ಚ್ ಬೆಂಗಳೂರು.

ತಂದೆ ತಾಯಿಗಳು ನನ್ನನ್ನು ತೊರೆದುಬಿಟ್ಟರೇನು; ಯೆಹೋವನು ನನ್ನನ್ನು ಸೇರಿಸಿಕೊಳ್ಳವನು. (ಕೀರ್ತ 27:10).

# ಜಾನಿ

ಅನೇಕ ವರ್ಷಗಳ ಹಿಂದೆ ವಿಧವೆಯಾದ ತಾಯಿಯೊಬ್ಬರಿಗೆ ಒಬ್ಬನೇ ಮಗನಿದ್ದನು. ಆ ಹುಡುಗನ ಹೆಸರು ಜಾನಿ. ಆ ತಾಯಿಯು ಬಹು ಭಕ್ತಿವಂತಳಾಗಿ ಪ್ರತಿನಿತ್ಯವೂ ತನ್ನ ಮಗನೊಂದಿಗೆ ದೇವರ ವಾಕ್ಯವನ್ನು ಓದಿ ಪ್ರಾರ್ಥಿಸುತ್ತಿದ್ದಳು. ಕೆಲವು ದಿನಗಳು ಉರುಳಿದ ನಂತರ ಜಾನಿ ಶಾಲೆಗೆ ಹೋಗಲಾರಂಭಿಸಿದ. ಅವನು ಶಾಲೆಯಲ್ಲಿ ಬಹಳ ನಮ್ರತೆಯಿಂದಲೂ ವಿಧೇಯನಾಗಿಯೂ ಇರುತ್ತಿದ್ದ. ಶಾಲೆಯಲ್ಲಿ ಅನೇಕ ಮಕ್ಕಳು ಕಿಡಿಗೇಡಿಗಳಾಗಿದ್ದರು. ಆದಾಗ್ಯೂ ಜಾನಿ ಮಾತ್ರ ಹಾಗಿರದೆ ಶಾಲೆಯಲ್ಲಿಯೂ ಉಪಾಧ್ಯಾಯರಿಗೆ ಅತೀ ಪ್ರೀತಿಯ ಒಬ್ಬ ವಿದ್ಯಾರ್ಥಿಯಾಗಿದ್ದನು. ಮನೆಯಲ್ಲಿಯೂ ಸಹ ತಾಯಿಗೆ ವಿಧೇಯನಾಗಿ ಅವಳ ಮೆಚ್ಚುಗೆಯ ಮಗನಾಗಿದ್ದ ಜಾನಿ. ತಾಯಿ ಸತ್ಯವೇದದಿಂದ ಹೇಳಿದ ಅನೇಕ ಕಥೆಗಳು ಜಾನಿಗೆ ಗೊತ್ತಿದ್ದವು. ಅವನು ಚಿಕ್ಕ ಕೂಸಾಗಿರುವಾಗಲೇ ಜಾನಿಯ ತಂದೆ ತೀರಿಹೋಗಿದ್ದ. ಅವರಿಗೆ ಬೇರೆ ಯಾರೂ ಇಲ್ಲದ ಕಾರಣ ಬಹಳ ಬಡತನದಲ್ಲಿ ಆ ತಾಯಿ ಮತ್ತು ಜಾನಿ ಜೀವಿಸುತ್ತಿದ್ದರು; ತಾಯಿ ಮಾತ್ರ ಪ್ರತಿ ದಿವಸ ಹೋಗಿ ಕೂಲಿ ಕೆಲಸಮಾಡಿ ತನ್ನ ಹೊಟ್ಟೇ ಉಪಜೀವನ ಮಾಡುತ್ತಿದ್ದಳು. ಹೀಗೆ ಅವರು ವಿಪರೀತ ಬಡತನದಲ್ಲಿದ್ದಾಗ್ಯೂ ಯಾವಾಗಲೂ ಸಂತೋಷಪಡುವಂತವರೂ ತೃಪ್ತಿಯುಳ್ಳವರೂ ಆಗಿದ್ದರು. ಯಾಕಂದರೆ ಅವರು ತಮ್ಮ ಜೀವಿತದಲ್ಲಿ ಬೇಕಾದ ಎಲ್ಲಾ ಸಂಗತಿಗಳಿಗಾಗಿ ದೇವರನ್ನೇ ಆತುಕೊಂಡಿದ್ದರು.

ಜಾನಿ 10 ವರ್ಷದ ಹುಡುಗನಾಗಿದ್ದಾಗ ಆ ದೇಶದಲ್ಲಿ ಭೀಕರವಾದ ಬರಗಾಲ ಬಿತ್ತು. ಮತ್ತು ಬೇರೆ ದೇಶದವರೊಡನೆ ಯುದ್ಧ ಪ್ರಾರಂಭವಾದ ಕಾರಣ ಕಾಳು ಕಡ್ಡಿ ಏನು ಸಿಕ್ಕದ ಹಾಗೆ ಆಯಿತು. ಎಲ್ಲೆಡೆಯಲ್ಲಿಯೂ ಹಾಹಾಕಾರ ಪ್ರಾರಂಭವಾಯಿತು. ವೈರಿಗಳ ದಬ್ಬಾಳಿಕೆ ಆ ದೇಶದವರ ಮೇಲೆ ಹೆಚ್ಚಾಯಿತು. ದೇಶದ ಅಧಿಕಾರಿಗಳು ಕಠಿಣವಾದ ಆಜ್ಞೆಗಳನ್ನು ತಮ್ಮ ಪ್ರಜೆಗಳ ಮೇಲೆ ಇಡಬೇಕಾಗಿ ಬಂತು. ಇಂಥ ಕಠಿಣ ದಿವಸಗಳಲ್ಲಿ ಈ ವಿಧವೆ ಮತ್ತು ಇವಳ ಮಗನಿಗೆ ಒಂದು ಹೊತ್ತು ಊಟವಿದ್ದರೆ ಇತ್ತು, ಇಲ್ಲದಿದ್ದರೆ ಇಲ್ಲದೆ ಹೋಯಿತು. ಹೀಗೆ ಬಹಳ ಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಅನೇಕ ರಾತ್ರಿ ಊಟವಿಲ್ಲದೆ ಹಸಿವೆಯಿಂದ ಬಳಲಿದವರಾಗಿದ್ದರು. ತಮ್ಮನ್ನು ಪ್ರೀತಿಸಿದಾತನಾದ ದೇವರಿಗೆ ಇವರು ಭಯಪಡುವವರಾಗಿ ನಡೆದು ಆತನ ಸನ್ನಿಧಿಯಲ್ಲಿ ಪ್ರಾರ್ಥಿಸುವವರಾಗಿದ್ದರು. ದೇಶದ ಅಧಿಕಾರಿಗಳಿಂದ ಪ್ರಕಟವಾಗಿರುವ ಆಜ್ಞೆಗಳಲ್ಲಿ ಒಂದು ಆಜ್ಞೆ ಹೀಗಿತ್ತು. ಅದೇನಂದರೆ, **"ಸಾಯಂಕಾಲ 7 ಘಂಟೆಯ ನಂತರ ಯಾವ ಮನೆಯ ಬಾಗಿಲು ತೆರೆದಿರಬಾರದು. ಮತ್ತು ಬೀದಿಯಲ್ಲಿ ಯಾವ ದೀಪದ ಬೆಳಕಾದರೂ ಕಾಣಿಸಬಾರದು"** ಎಂಬದಾಗಿತ್ತು. ಹೀಗಿರುವಾಗ ಒಂದು ರಾತ್ರಿ ಈ ತಾಯಿಯು ತನ್ನ ಮಗನಾದ ಜಾನಿಯೊಡನೆ ಕುಳಿತು ಬೇಗನೆ ದೇವರವಾಕ್ಯ ಓದಿ, ಪ್ರಾರ್ಥನೆ ಮುಗಿಸಿ ಹೀಗೆಂದಳು: **"ಮಗನೇ, ಈ ರಾತ್ರಿ ಸಹ ನಮಗೆ ಊಟವಿಲ್ಲ. ಹೇಗೂ ಚಿಂತೆಯಿಲ್ಲ, ನಮ್ಮೆಲ್ಲಾ ಭಾರವನ್ನು ದೇವರ ಮೇಲೆ ಹಾಕಿ ನಿದ್ರಿಸುವ"** ಎಂದು ಹೇಳಿದಳು. ಜಾನಿ, ಪಾಪ, ಚಿಕ್ಕ ಬಾಲಕ. ದಿನವೆಲ್ಲಾ ಶಾಲೆಗೆ ಹೋಗಿ ಆಟವಾಡಿ ದಣಿದಂಥ ದೇಹ, ಬಹಳ ಹಸಿವೆಯಾಗಿತ್ತು. ಆದಾಗ್ಯೂ ತಾಯಿ ಹೇಳಿದ ಮಾತನ್ನು ಲಕ್ಷ್ಯವಿಟ್ಟು ಕೇಳಿದ. ಮತ್ತು ನಿದ್ರೆ ಹೋಗಲು ಪ್ರಯತ್ನಿಸಿದ. ಸ್ವಲ್ಪ ಸಮಯದನಂತರ ತಾಯಿಗೆ ನಿದ್ದೆ ಹತ್ತಿತು. ಜಾನಿ ಮಾತ್ರ ನಿದ್ರಿಸಿರಲಿಲ್ಲ. ಅವನು ಎದ್ದು ಮನೆಯ ಬಾಗಿಲನ್ನು ಸ್ವಲ್ಪ ಓರೆಮಾಡಿ ಕುಳಿತ. ಅಷ್ಟರಲ್ಲಿ ಬೀದಿಯನ್ನು ಕಾಯುವ ಸಿಪಾಯಿ ಸಿಳ್ಳು ಹಾಕುತ್ತಾ ಕೋಲಿನಿಂದ ಶಬ್ದಮಾಡುತ್ತಾ, 'ಈ ಮನೆಯಲ್ಲಿ ಯಾರು ಇದ್ದಾರೆ? ಯಾಕೆ ಮನೆಯ ಬಾಗಿಲು ತೆರೆದಿದೆ?" ಎಂದು ಕೇಳುತ್ತಾ ಬಂದ. ಆ ತಾಯಿ ಈ ಶಬ್ದವನ್ನು ಕೇಳಿ ಗಾಬರಿಯಿಂದ ಎಚ್ಚತ್ತು ನಡುಗುತ್ತಾ ಆ ಸಿಪಾಯಿಯ ಮುಂದೆ, "ಅಯ್ಯಾ, ತಪ್ಪಾಯಿತು, ದಯವಿಟ್ಟು ಕ್ಷಮಿಸಿರಿ" ಎಂದು ಬೇಡಿಕೊಳ್ಳಲಾರಂಭಿಸಿದಳು. ಆಗ ಜಾನಿ ಮುಂದೆ ಬಂದು ಹೀಗೆ ಹೇಳಿದ, "ಅಯ್ಯಾ, ನಮ್ಮ ಮನೆಯ ಬಾಗಿಲನ್ನು ಸ್ವಲ್ಪವೇ ಓರೆಯಾಗಿ ತೆರೆದಿಟ್ಟವನು ನಾನು ಅಂದ". ಆಗ ಸಿಪಾಯಿ: ಯಾಕೆ ತೆರೆದಿಟ್ಟಿದ್ದೀ?

ಜಾನಿ: ಯಾಕಂದರೆ ನಾವು ಬಹಳ ಬಡವರು. ನಮಗೆ ಊಟ ಮಾಡುವದಕ್ಕೆ ಏನೂ ಇಲ್ಲ.

ಸಿಪಾಯಿ: ಆದರೆ ನೀನು ಮನೆಯ ಬಾಗಿಲನ್ನು ಯಾಕೆ ತೆರೆದಿಡಬೇಕು?

ಜಾನಿ: ಯಾಕಂದರೆ ನನಗೆ ನನ್ನ ತಾಯಿ ಹೇಳಿದ ಒಂದು ಕಥೆ ನೆನಪಾಯಿತು. ಅದೇನಂದರೆ, ದೇವರು ತನ್ನ ಸೇವಕನಾದ ಎಲೀಯನಿಗೆ ಕಾಗೆಯ ಮುಖಾಂತರ ರೊಟ್ಟಿಯನ್ನು ಮಾಂಸವನ್ನು ಕೊಟ್ಟು ತೃಪ್ತಿಪಡಿಸಿದನಂತೆ. ಎಲೀಯನು ಜೀವಸ್ವರೂಪನಾದ ದೇವರನ್ನು ನಂಬಿದ್ದನು. ನಾವು ಸಹ ಜೀವಸ್ವರೂಪನಾದ ದೇವರನ್ನು ನಂಬಿದ್ದೇವೆ. ದೇವರು ಕಾಗೆಯ ಮೂಲಕ ರೊಟ್ಟಿ ಕಳುಹಿಸಿದರೆ ನಮ್ಮ ಮನೆಯೊಳಕ್ಕೆ ಬರುವದಕೋಸ್ಕರ ಬೇಕಾದಷ್ಟು ಸ್ಥಳಕ್ಕಾಗಿ ನಾನು ಬಾಗಿಲನ್ನು ಓರೆಯಾಗಿ ತೆರೆದಿಟ್ಟಿದ್ದೇನೆ.

ಸಿಪಾಯಿ ಜಾನಿಯ ಈ ಮಾತುಗಳನ್ನು ಕೇಳಿ ಬಹಳ ಸಂತೋಷವುಳ್ಳವನಾಗಿ ಆ ಮಗನನ್ನು ಅಪ್ಪಿಕೊಂಡು ಮುದ್ದಿಟ್ಟು, "ಮಗನೇ, ನಿನ್ನಲ್ಲಿರುವ ನಂಬಿಕೆ ಬಹಳ ದೊಡ್ಡದು" ಎಂದು ಹೇಳಿ ಅಲ್ಲೇ ನಿಂತಿರುವ ಅವನ ತಾಯಿಗೆ, **"ಅಮ್ಮಾ ಈಗ ನೀವು ಬಾಗಿಲು ಮುಚ್ಚಿಕೊಳ್ಳಿರಿ. ನಾನು ಹೋಗಿ ನಿಮಗೆ ಬೇಕಾದ ಆಹಾರ ತೆಗೆದುಕೊಂಡು ಬರುತ್ತೇನೆ. ಇದು ಮಾತ್ರವಲ್ಲದೆ ನಮ್ಮ ದೇಶದಲ್ಲಿರುವ ಬರಗಾಲ ತೀರುವವರೆಗೆ ನಿಮಗೆ ಪ್ರತಿನಿತ್ಯದ ಆಹಾರವನ್ನು ನಾನೇ ಒದಗಿಸಿಕೊಡುವೆನು"** ಎಂದು ಹೇಳಿದ. ಆಗ ತಾಯಿ ಮತ್ತು ಅವಳ ಮಗನಾದ ಜಾನಿ ಕೃತಜ್ಞತೆಯುಳ್ಳವರಾಗಿ ಬಂದ ಸಿಪಾಯಿಗೆ ವಂದನೆ ತಿಳಿಸಿದರು. ಮತ್ತು ಮೊಣಕಾಲೂರಿ ತಂದೆಯಾದ ದೇವರಿಗೆ ಕೃತಜ್ಞತಾ ಸ್ತೋತ್ರ ಮಾಡಿದರು.

ಪ್ರಿಯ ಮಕ್ಕಳೇ, ಜಾನಿ ಚಿಕ್ಕ ಬಾಲಕನಾಗಿದ್ದಾಗ್ಯೂ ಅವನು ದೇವರ ವಾಕ್ಯ ಕೇಳಿ ನಂಬಿ ಕಷ್ಟದ ಸಮಯದಲ್ಲಿ ದೇವರನ್ನೇ ಆತುಕೊಳ್ಳಬೇಕೆಂದು ಕಲಿತುಕೊಂಡಿದ್ದ. ಮತ್ತು ಅವನಲ್ಲಿರುವ ಯಥಾರ್ಥವಾದ ನಂಬಿಕೆಯ ಫಲವಾಗಿ ಆಶೀರ್ವಾದ ಹೊಂದಿದ.

ನೀವು ಸಹ ನಿಮ್ಮ ಮನೆಗಳಲ್ಲಿ ನಿಮ್ಮ ತಂದೆತಾಯಂದಿರು ಓದಿ ತಿಳಿಸಿದಂತೆ ದೇವರ ವಾಕ್ಯಗಳನ್ನು ಲಕ್ಷವಿಟ್ಟು ಕೇಳಿರಿ. ನಿಮ್ಮ ತಂದೆ ತಾಯಂದಿರಿಗೂ ನಿಮ್ಮ ಎಲ್ಲಾ ಉಪಾಧ್ಯಾಯರಿಗೂ ಎಲ್ಲಾ ಹಿರಿಯರಿಗೂ ವಿಧೇಯರಾಗಿರಿ. ಎಲ್ಲಾ ಸಮಯಗಳಲ್ಲಿ ದೇವರು ನಿಮ್ಮ ಕೊರತೆಗಳನ್ನು ನೀಗಿಸುತ್ತಾನೆಂದು ನಂಬಿರಿ. ದೇವರು ನಿಮ್ಮನ್ನು ಆಶೀರ್ವದಿಸಲಿ.

**"ನಂಬಿಕೆಯು ನಿರೀಕ್ಷಿಸುವವುಗಳ ನಿಜ ಸ್ವರೂಪವೂ ಕಾಣದವುಗಳ ಪ್ರಮಾಣವೂ ಆಗಿದೆ"** (ಇಬ್ರಿ. 11:1).

– ಸಂಗ್ರಹ.

ಆತನನ್ನು ಸೇವಿಸುವವರ ಸಂತಾನದವರು ಯೆಹೋವನ ಸಂತಾನದವರೆಂದು ಎಣಿಸಲ್ಪಡುವರು.
(ಕೀರ್ತ 22:30).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಭಾರತದ ಕ್ಷಿಪಣಿ ಕಾರ್ಯಕ್ರಮಗಳ ನಿರ್ದೇಶಕಿಯಾಗಿ ಆಯ್ಕೆಯಾಗಿರುವ ಮೊದಲ ಮಹಿಳೆ 48ರ ಹರೆಯದ ಟೆಸ್ಸಿ ಥಾಮಸ್, ಟೆಸ್ಸಿ ನೇತೃತ್ವದಲ್ಲಿ ತಯಾರಾಗುತ್ತಿರುವ ಅಗ್ನಿ–5 ಕ್ಷಿಪಣಿ ಯಶಸ್ವಿಯಾದರೆ ಅಂತರ್ ಖಂಡ ಉತ್ಕ್ಷೇಪಕ ಕ್ಷಿಪಣಿಗಳನ್ನು ಹೊಂದಿರುವ ಅಮೇರಿಕ, ಚೀನ ಮತ್ತು ರಶ್ಯಾದ ಸಾಲಿಗೆ ಭಾರತವನ್ನು ಸೇರಿಸಿದ ಹೆಗ್ಗಳಿಕೆ ಅವರಿಗೆ ದೊರಕಲಿದೆ.
- ಈಶಾನ್ಯ ಭಾರತ: ಭೂಕಂಪ–ಎರಡು ತಿಂಗಳ ಹಿಂದೆಯಷ್ಟೇ 50ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ ಭೂಕಂಪದ ನೆನಪು ಮರೆಯಾಗುವ ಮೊದಲೇ ಈಶಾನ್ಯ ಭಾರತದಲ್ಲಿ ಮತ್ತೆ ಭೂಕಂಪವಾದ ನಿಮಿತ್ತ ಜನರು ಗಾಬರಿಯಾದರು.
- ಸೌಂದರ್ಯ ಸ್ಪರ್ಧೆಯಲ್ಲಿ ನ್ಯೂಯಾರ್ಕ್‌ನ ಚಂದನ ಪ್ರೀನಿ ಕೌರ್ ಅವರು ಮಿಸ್ ಇಂಡಿಯಾ ಯುಎಸ್‌ಎ ಆಗಿ ಆಯ್ಕೆಯಾದರು.
- ಭಾರತ ಮತ್ತು ಚೀನಿ ಪ್ರಧಾನಿಗಳ ನಡುವಣ ಕಳೆದ ವಾರದ ಸಭೆಯ ಫಲಿತಾಂಶದ ಬಗ್ಗೆ ಚೀನ ಅತ್ಯುತ್ಸಾಹವನ್ನು ಪ್ರಕಟಿಸಿದೆ ಹಾಗೂ ತಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ನಿಕಟಗೊಳಿಸುವುದರಿಂದ ಎರಡೂ ದೇಶಗಳನ್ನು ತಡೆಯಲು ಯಾವುದೇ ಶಕ್ತಿಗೆ ಸಾಧ್ಯ ಇಲ್ಲವೆಂದು ಹೇಳಿದೆ.
- 10 ಲಕ್ಷ ಮಕ್ಕಳಿಗೆ ಫೇಸ್ ಬುಕ್ ಚಟ: ವಿಶ್ವದಾದ್ಯಂತ 7 ರಿಂದ 12 ವರ್ಷದೊಳಗಿನ ಸುಮಾರು 10 ಲಕ್ಷ ಮಕ್ಕಳು ಸಾಮಾಜಿಕ ಅಂತರ್ಜಾಲ ತಾಣವಾದ ಫೇಸ್ ಬುಕ್ ಚಟಕ್ಕೆ ಅಂಟಿಕೊಂಡಿದ್ದು, ದಿನಕ್ಕೆ ಒಂದು ಬಾರಿಯಾದರೂ ಲಾಗಿನ್ ಆಗಿರುತ್ತಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ಸುಮಾರು 970,000 ಮಕ್ಕಳು ಈ ವೆಬ್‌ಸೈಟ್ ಬಳಸುತ್ತಿದ್ದು ತಮ್ಮ ಜೀವನದ ಭಾಗವನ್ನಾಗಿಸಿಕೊಂಡಿದ್ದಾರೆ ಎಂದು "ದಿ ಸನ್" ಪತ್ರಿಕೆ ವರದಿ ಮಾಡಿದೆ.
- ರಾಜ್ಯದ ಯಾವುದೇ ಉಪ ನೊಂದಣಾಧಿಕಾರಿಗಳ ಕಚೇರಿಗಳಲ್ಲಿ ಆನ್‌ಲೈನ್ ಮೂಲಕ ಆಸ್ತಿನೊಂದಣಿ ಮಾಡುವಂತಹ ಯೋಜನೆಯನ್ನು ಇನ್ನು ಆರು ತಿಂಗಳುಗಳಲ್ಲಿ ರಾಜ್ಯದಾದ್ಯಂತ ಜಾರಿಗೆ ತರಲಾಗುವದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.
- ಹಾಕಿ: ಭಾರತಕ್ಕೆ 10ನೇ ಸ್ಥಾನ: ಒಲಿಂಪಿಕ್ಸ್‌ನಲ್ಲಿ ದಾಖಲೆ. ಎಂಟು ಚಿನ್ನದ ಪದಕ ಗೆದ್ದಿರುವ ಭಾರತ ಪುರುಷರ ತಂಡದವರು ಅಂತರ ರಾಷ್ಟ್ರೀಯ ಹಾಕಿ ಫೆಡರೇಷನ್ ಪ್ರಕಟಿಸಿರುವ ನೂತನ ರ್‍ಯಾಂಕಿಂಗ್ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದ್ದಾರೆ. ಮಹಿಳೆಯರ ತಂಡ 13ನೇ ಸ್ಥಾನಕ್ಕೆ ಕುಸಿದಿದ್ದಾರೆ.

## ಡಿಜಿಎಮ್ ಬೇತೇಲ್ ಅಂಕಣ

- **ಡಿಸೆಂಬರ್ 3 ರಂದು ದಾಂಪತ್ಯ ಜೀವಿತಕ್ಕೆ ಪ್ರವೇಶಿಸಿದ ಸಹೋ॥ ಜೆನಿಫರ್ ಹಾಗೂ ಸಹೋ॥ ನೊವೆಲ್ ಮಧುರಾಜ್‌ರವರಿಗೆ ಡಿಜಿಎಮ್ ಬೇತೇಲ್ ಸಭೆಯ ಪರವಾಗಿ ಮದುವೆಯ ಶುಭಾಶಯಗಳು.**
- **ಡಿಜಿಎಮ್ ಬೇತೇಲ್ ಉಡುಪಿಯ ಶಂಕರಪುರ ಸಭೆಯಲ್ಲಿ ಡಿಸೆಂಬರ್ 26 ರಿಂದ ಫೆಬ್ರವರಿ 3 ರವರೆಗೆ 40 ದಿವಸದ ಉಪವಾಸ ಕೂಟವನ್ನು ಏರ್ಪಡಿಸಲಾಗಿದೆ. ಈ ಕೂಟಕ್ಕೆ ದೇಶದ ನಾನಾ ಕಡೆಗಳಿಂದ ದೇವ ಸೇವಕರು ಬಂದು ಕರ್ತನ ಸೇವೆಯನ್ನು ಮಾಡಲಿದ್ದಾರೆ. ನೀವೆಲ್ಲರೂ ಈ ಕೂಟದಲ್ಲಿ ಭಾಗವಹಿಸಿ ಕರ್ತನಿಂದ ಆಶೀರ್ವಾದವನ್ನು, ಸ್ವಸ್ಥತೆಯನ್ನು, ಬಿಡುಗಡೆಯನ್ನು ಕರ್ತನಿಂದ ಹೊಂದಿಕೊಳ್ಳಿರಿ. ಸರ್ವರಿಗೂ ಆದರದ ಸುಸ್ವಾಗತ.**
- **ಹೊಸ ವರುಷದ ವಾಕ್ಯಗಳೊಳಗೊಂಡ ಕ್ಯಾಲೆಂಡರ್ ಸಿದ್ದವಾಗಿದೆ ಬೇಕಾದವರು ಬುಕ್ ಸ್ಟಾಲನ್ನು ಸಂಪರ್ಕಿಸಿ ಖರೀದಿಸಬಹುದು.**
- **ಪಾ॥ ಸುನಿಲ್ ಡಿ'ಸೋಜಾರವರು ದುಬೈ, ಬಹರೈನ್, ಮಸ್ಕತ್ ಹಾಗೂ ಕುವೈಟ್‌ನಲ್ಲಿ ಕರ್ತನ ಸೇವೆಯನ್ನು ಮಾಡಿ ಬರುವಂತೆ ಕರ್ತನು ಕೃಪೆತೋರಿಸಿದನು.**
- **ಡಿಸೆಂಬರ್ 20 ರಂದು ದಾಂಪತ್ಯ ಜೀವಿತಕ್ಕೆ ಪ್ರವೇಶಿಸಿದ ಸಹೋ॥ ಸಂದೀಪ್ ಹಾಗೂ ಸಹೋ॥ ಪ್ರೀತಾರವರಿಗೆ ಡಿಜಿಎಮ್ ಬೇತೇಲ್ ಸಭೆಯ ಪರವಾಗಿ ಮದುವೆಯ ಶುಭಾಶಯಗಳು.**
- **ಸಹೋ। ವಿನೋದ್ ಲೋಬೊ ಹಾಗೂ ಸಹೋ। ಪ್ರೀಮಾ ಲೋಬೊ ಇವರ ದಾಂಪತ್ಯ ಜೀವಿತವನ್ನು ಆಶೀರ್ವದಿಸಿ ಕರ್ತನು ಗಂಡು ಮಗುವನ್ನು ಅನುಗ್ರಹಿಸಿದ್ದಾನೆ.**

ಯೆಹೋವನು ಕುಗ್ಗಿಹೋದವರಿಗೆ ಆಶ್ರಯವೂ ಆಪತ್ಕಾಲದಲ್ಲಿ ದುರ್ಗವೂ ಆಗಿರುವನು.
(ಕೀರ್ತ 9:9).

**ಕೀರ್ತನೆ 1ನೇ ಅಧ್ಯಾಯದಿಂದ 10ನೇ ಅಧ್ಯಾಯದವರೆಗೆ ಓದಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**ಮಕ್ಕಳ ಸ್ವರ**

| | | |
|---|---|---|
| 1. ಯೆಹೋವನು ನೀತಿವಂತರ ಮಾರ್ಗವನ್ನು | – | ದಿಕ್ಕು |
| 2. ಕೆಟ್ಟದ್ದು ನಿನ್ನ ಬಳಿಯಲ್ಲಿ | – | ಸಮರ್ಪಿಸಿರಿ |
| 3. ನಿನ್ನ ನಾಮವನ್ನು ಪ್ರೀತಿಸುವವರು | – | ಕಾಪಾಡುತ್ತಾನೆ |
| 4. ದೀನರ ನಿರೀಕ್ಷಣೆಯು | – | ಗುರಾಣಿ |
| 5. ದಿಕ್ಕಿಲ್ಲದವನಿಗಿ | – | ಲಕ್ಷಿಸುವನು |
| 6. ಹಾಸಿಗೆಯ ಮೇಲೆ ಇರುವಾಗ ಹೃದಯದಲ್ಲೇ | – | ಪ್ರಕಾಶಪಡಿಸಿದ್ದೀ |
| 7. ಆತನು ಯಥಾರ್ಥರನ್ನು | – | ಸೇವಿಸಿರಿ |
| 8. ನೀನು ನನ್ನ ಹೃದಯದಲ್ಲಿ ಹೆಚ್ಚಾದ ಆನಂದವನ್ನು | – | ನನ್ನನ್ನು ನಡಿಸು |
| 9. ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ | – | ಕಾಪಾಡುತ್ತಾನೆ |
| 10. ಆತನ ಕಣ್ಣುಗಳು ಮಾನವರನ್ನು | – | ಕೆಡುವುದೇ ಇಲ್ಲ |
| 11. ಧರ್ಮವನ್ನು ಮೀರಿ ನಡೆಯುವವರ | – | ನೇರವೇರಿಸುವವನು ಆಗಿದ್ದಾನೆ |
| 12. ನಿನ್ನ ನೀತಿಗೆ ಸರಿಯಾಗಿ | – | ಮರದ ಹಾಗಿರುವನು. |
| 13. ನ್ಯಾಯವಾದ ಯಜ್ಞಗಳನ್ನು | – | ತಂಗಲಾರದು |
| 14. ನೀನು ನನ್ನನ್ನು ಕಾಯುವ | – | ಕಿರೀಟವನ್ನು ಇಟ್ಟಿದ್ದಿ |
| 15. ಪ್ರಭಾವವನ್ನು ಮಾನವನ್ನು ಅವನಿಗೆ | – | ನೀವೆಲ್ಲರೂ ನನ್ನಿಂದ ತೊಲಗಿರಿ |
| 16. ದೀನರ ಕೋರಿಕೆಯನ್ನು | – | ಆಲೋಚಿಸಿಕೊಳ್ಳಿರಿ |
| 17. ಜನರೊಳಗೆ ನಂಬಿಕೆಯುಳ್ಳವರು | – | ನೋಡುತ್ತದೆ |
| 18. ಆಕಾಶದಲ್ಲಿ ನಿನ್ನ ವೈಭವವನ್ನು | – | ನಿನ್ನಲ್ಲಿ ಉಲ್ಲಾಸಗೊಳ್ಳುವರು |
| 19. ಯೆಹೋವನನ್ನು ಭಯಭಕ್ತಿಯಿಂದ | – | ಕಾಣಿಸುವದೇ ಇಲ್ಲ |
| 20. ನಿನ್ನ ದಯವು ದೊಡ್ಡ ಗುರಾಣಿಯಂತೆ | – | ಉಂಟು ಮಾಡಿದ್ದೀ. |

**ವಿಶೇಷ ಸೂಚನೆ : ಪ್ರತಿ ತಿಂಗಳ 15ನೇ ತಾರೀಕಿನ ಒಳಗೆ ನಮ್ಮ ಕೈಗೆ ನಿಮ್ಮ ಉತ್ತರಗಳು ತಲುಪತಕ್ಕದ್ದು.**

**ಕಳೆದ ಡಿಸೆಂಬರ್ ತಿಂಗಳ ಮಕ್ಕಳಸ್ವರ ಸಂಚಿಕೆಯ ಉತ್ತರಗಳು :**

ಯೆಹೆಜ್ಕೇಲ 39ನೇ ಅಧ್ಯಾಯ

1. ಯೆಹೆಜ್ಕೇಲನು, 2. ಒಣಗಿದ ಎಲುಬು, 3. ಧ್ವನಿ, 4. ಶ್ವಾಸವನ್ನು, 5. ಟಕಟಕ, 6. ಚರ್ತುದಿಕ್ಕಿನ, 7. ದೊಡ್ಡ ಸೈನ್ಯವಾಗಿ, 8. ಪೂರ್ಣವಂಶವು, 9. ಇಸ್ರಾಯೇಲ್ ದೇಶಕ್ಕೆ, 10. ಸಂಕಲ್ಪ.

**ನಗೆ ಹನಿ**

* ಪದಾರ್ಥಗಳ ಬೆಲೆ ಗಗನಕ್ಕೆ ಮುಟ್ಟಿರೋವಾಗ ನೀನು ಹೇಗೆ ಜೀವನ ನಿಭಾಯಿಸ್ತೀಯ?
ಗೆಳೆಯ ಕೇಳಿದ. ನನಗೆ ಬರೆಯೋ ಅಭ್ಯಾಸ ಇದೆ. ಅದರಿಂದ ಚಿಂತೆಯಿಲ್ಲ'

ಕತೆ ಕವನ ಬರೀತೀಯೇನು?

ಅಲ್ಲ, ನಮ್ಮ ಮಾವನಿಗೆ ಆಗಗ ಪತ್ರ ಬರೀತೀನಿ. ಎಂದು ಭೂಪ!

### ಪ್ರಿಯ ದೇವರ ಸ್ವರ ವಾಚಕರೆಲ್ಲರಿಗೂ ಹೊಸ ವರುಷದ ಶುಭಾಷಯಗಳು

# ಸಂತೋಷವುಳ್ಳ ಕುಟುಂಬ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಮಹಿಳೆಯರ ಸ್ವರ**

ಮಾತ್ರವಲ್ಲದೆ ತಂದೆ ಬೇರೆ ಹೆಂಗಸಿನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದನು. ತಾಯಿ ಕೂಡ ಬೇರೆ ಗಂಡಸಿನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದರು. ಇವಳು ಬೆಳೆದು ಬರುವಾಗ ದೊಡ್ಡವರಿಗೆ ಮಾರ್ಯದೆ ಕೊಡುವುದು, ಹಿರಿಯರನ್ನು ಗೌರವಿಸುವುದು, ಇತರರೊಂದಿಗೆ ಹೇಗೆ ಮಾತನಾಡುವುದು, ಶಿಸ್ತು ಕ್ರಮ ಏನೂ ಗೊತ್ತಿಲ್ಲದವಳಾಗಿ ಲಗಾಮು ಇಲ್ಲದ ಕುದುರೆಯಂತೆ ಬೆಳೆದಳು. ಅವಳಿಗೆ ಎಲ್ಲವೂ ಸಿಕ್ಕಿದರೂ, ಅಪ್ಪ ಅಮ್ಮನ ಪ್ರೀತಿ ಮಾತ್ರ ಸಿಗಲಿಲ್ಲ. ಹೀಗೆಯೇ ಕಾಲೇಜ್‌ನಲ್ಲಿ ಹೋಗುವಾಗ ಗೆಳೆಯರ ಜೊತೆಯಲ್ಲಿ ಸೇರಿ ಮಾದಕ ವ್ಯಸನಿಯಾಗಿ ಬಿಟ್ಟಳು. ತನ್ನ ಜೀವಿತವನ್ನು ಬೇರೆ ಹುಡುಗರಿಗೆ ಒಪ್ಪಿಸಿ ತನ್ನ ಮಾನವನ್ನು ಹಾಳು ಮಾಡಿಕೊಂಡಳು ಆದರೆ ಅವಳು ಹುಡುಕುವಂತದ್ದು ಅವಳಿಗೆ ಸಿಗಲೇ ಇಲ್ಲ. ಕೊನೆಗೆ ಆತ್ಮಹತ್ಯೆ ಮಾಡಿಕೊಂಡು ಸಾಯಬೇಕೆಂದು ತೀರ್ಮಾನ ತೆಗೆದುಕೊಳ್ಳುವಾಗ ಅವಳ ಜೊತೆಯಲ್ಲಿ ಓದುವಂತಹ ಒಬ್ಬ ಜೊತೆ ಸಹೋದರಿ ಅವಳಿಗೆ ಒಂದು ಹೊಸ ಒಡಂಬಡಿಕೆ ಪುಸ್ತಕವನ್ನು ಕೊಟ್ಟು ಇದನ್ನು ನೀನು ಓದು ಈ ಲೋಕದಲ್ಲಿ ಹೆತ್ತ ತಂದೆ ತಾಯಿಗಿಂತಲೂ ಹೆಚ್ಚಾಗಿ ನಮ್ಮೆಲ್ಲರನ್ನು ಪ್ರೀತಿಸುವ ಯೇಸುಕ್ರಿಸ್ತನ ಪ್ರೀತಿಯನ್ನು ತಿಳಿಯುವಿ ಎಂದಳು. ಆ ಸತ್ಯವೇದವನ್ನು ಇವಳು ಮನೆಗೆ ತಂದು ಓದಿ ಮುಗಿಸಿದಾಗ ಆವಳ ಶರೀರದ ಭಾರವೆಲ್ಲಾ ಕಡಿಮೆಯಾದ ಹಾಗೆ ಆಯಿತು. ನಿರಾಶೆ ಹೋಗಿ ಉತ್ಸಾಹ ಬರತೊಡಗಿತು. ಯೇಸುಕ್ರಿಸ್ತನು ಅವಳನ್ನು ಅಪಾರವಾಗಿ ಪ್ರೀತಿಸುತ್ತಿದ್ದಾನೆಂದು ಅವಳು ತಿಳಿದುಕೊಂಡಳು. ಮನಸ್ಸಿಗೆ ಸಮಾಧಾನ ಸಿಕ್ಕಿತು. ಮೊದಲು ರಾತ್ರಿಯಲ್ಲಿ ಸರಿಯಾಗಿ ನಿದ್ರೆ ಬರುತ್ತಿರಲಿಲ್ಲ, ಈಗ ಒಳ್ಳೆ ನಿದ್ರೆ ಬರಲು ಆರಂಭಿಸಿತು, ಅವಳಿಗೆ ಗೊತ್ತಿಲ್ಲದೇ ಮಾದಕ ದ್ರವ್ಯಗಳಿಂದ ಬಿಡುಗಡೆ ಹೊಂದಿ ಚರ್ಚಿಗೆ ಹೋಗಲು ಆರಂಭಿಸಿದಳು. ಸ್ವಲ್ಪ ದಿವಸಗಳಲ್ಲಿಯೇ ರಕ್ಷಣೆ ಹೊಂದಿ ನೂತನ ಸೃಷ್ಟಿಯಾದಳು. ಇವಳ ಸತತ ಪ್ರಾರ್ಥನೆಯಿಂದ ಇವಳ ತಂದೆ ತಾಯಿ ಕೂಡ ರಕ್ಷಣೆ ಹೊಂದಿ ದೇವರ ಮಕ್ಕಳಾದರು. ಈಗ ಅವರ ಮನೆಯಲ್ಲಿ ಪ್ರತಿ ದಿವಸ ಕುಟುಂಬ ಪ್ರಾರ್ಥನೆ ನಡೆಯುತ್ತಾ ಇದೆ. ದೇವರ ವಾಕ್ಯ ಓದುತ್ತಾರೆ. ಮನೆಯ ಎಲ್ಲಾ ಭಾಗಗಳಲ್ಲಿ ದೇವರ ವಾಕ್ಯದ ಬೋರ್ಡ್‌ಗಳನ್ನು ನೇತು ಹಾಕಿದ್ದಾರೆ. ಇವರ ತಂದೆ ತಾಯಿ ದೇವರ ಸೇವೆಗೆ ಒಳ್ಳೆ ಸಹಾಯ ಮಾಡುತ್ತಿದ್ದಾರೆ. ಇದು ಹೇಗೆ ಸಾಧ್ಯವಾಯಿತು ದೇವರ ವಾಕ್ಯದಿಂದ ಮಾತ್ರ ಸಾಧ್ಯವಾಯಿತು.

6) ದೇವರ ವಾಕ್ಯದ ವಿವರಣೆಯಿಂದ ಜ್ಞಾನೋದಯ ವುಂಟಾಗುತ್ತದೆ (ಕೀರ್ತ. 119:130): ಅನೇಕ ತಂದೆ ತಾಯಿಯವರು ತಮ್ಮ ಮಕ್ಕಳಿಗೆ ದೇವರ ವಾಕ್ಯವನ್ನು ಬಾಯಿ ಪಾಠ ಮಾಡಿಸುತ್ತಾರೆ ಇದು ತುಂಬಾ ಒಳ್ಳೆಯದು. ಆದರೆ ಅದನ್ನು ವಿವರಿಸುವುದಿಲ್ಲ.

ಪ್ರಿಯರೇ, ನಾವು ಅ.ಕೃ. 8:30–40 ರಲ್ಲಿ ಕರ್ತನಾದ ಯೇಸುಕ್ರಿಸ್ತನು ಫಿಲಿಪ್ಪನನ್ನು ಸುವಾರ್ತಾ ಸೇವೆಯಲ್ಲಿ ನಡೆಸುವ ವಿಧಾನವನ್ನು ನಾವು ನೋಡುತ್ತೇವೆ. ಕಂಚುಕಿಯು ದೇವಾಲಯದಿಂದ ಮನೆಗೆ ಹಿಂದಿರುಗುವ ಮಾರ್ಗದಲ್ಲಿ ಕರ್ತನು ಫಿಲಿಪ್ಪನನ್ನು ಸಂಧಿಸುವಂತೆ ಮಾಡಿದ ಆದರೆ ಕಂಚುಕಿಯು ಯೆಶಾಯ 53ನೇ ಅಧ್ಯಾಯವನ್ನು ಓದುತ್ತಿದ್ದನು. ಆದರೆ ಅದು ಅವನಿಗೆ ಅರ್ಥವಾಗಿರಲಿಲ್ಲ. ಫಿಲಿಪ್ಪನು ಅವನಿಗೆ ಅದನ್ನು ವಿವರಿಸಿ ಹೇಳಿದಾಗ ಅವನಲ್ಲಿ ಪಾಪದ ಅರುಹು ಉಂಟಾದದ್ದು ಮಾತ್ರವಲ್ಲ ರಕ್ಷಣೆಯ ಪ್ರಾಮುಖ್ಯತೆಯನ್ನು ತಿಳಿದುಕೊಂಡು ಫಿಲಿಪ್ಪನ ಕೈಗಳಿಂದ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡನು. **"ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ?** ಇದಕ್ಕೆ **ಸರಿಯಾಗಿ ಶುಭದ ಸುವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ ಎಂದು ಬರೆದದೆ. ಆದರೂ ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ. ಈ ವಿಷಯದಲ್ಲಿ ಯೆಶಾಯನು ಕರ್ತನೇ, ನಾವು ಸಾರಿದ ವಾರ್ತೆಯನ್ನು ಯಾರು ನಂಬಿದರು ಎಂದು ನುಡಿಯುತ್ತಾನೆ. ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ"** (ರೋಮ. 10:14–17). ಮಕ್ಕಳಿಗೆ ದೇವರ ವಾಕ್ಯವನ್ನು ವಿವರಿಸಿ ಹೇಳುವಾಗ ತಿಳುವಳಿಕೆ ಉಂಟಾಗುತ್ತದೆ. ವಾಕ್ಯದ ತಿಳುವಳಿಕೆ ಉಂಟಾದರೆ ಫಲಕೊಡಲು ಸಾಧ್ಯವಾಗುತ್ತದೆ. ಮತ್ತಾ. 13:23 ರಲ್ಲಿ **"ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು"**. ವಾಕ್ಯವನ್ನು ತಿಳುಕೊಳ್ಳದೆ ಫಲಕೊಡಲು ಸಾಧ್ಯವಿಲ್ಲ. ಇವತ್ತಿನ ದಿನಮಾನಗಳಲ್ಲಿ ಅನೇಕ ಮಕ್ಕಳಿಗೆ ದೇವರ ವಾಕ್ಯವನ್ನು ಬಾಯಿಪಾಠ ಹೇಳಿಕೊಡಲಾಗುತ್ತಿದೆ ತುಂಬಾ ವಾಕ್ಯಗಳು ಅವರ ನೆನಪಿನಲ್ಲಿವೆ. ಆದರೆ ವಾಕ್ಯದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದ ಕಾರಣ ಅನೇಕ ಮಕ್ಕಳು ದಾರಿ ತಪ್ಪುತ್ತಾ ಇದ್ದಾರೆ. ತಪ್ಪಾದ ಮಾರ್ಗದಲ್ಲಿ, ಪಾಪದಲ್ಲಿ ಜೀವಿಸುತ್ತಿದ್ದಾರೆ. ಆದರೆ ವಾಕ್ಯದ ವಿವರಣೆಯು ಅತೀ

ಯೆಹೋವನ ಆಶೀರ್ವಾದವು ಭಾಗ್ಯದಾಯಕವು ಅದು ವ್ಯಸನವನ್ನು ಸೇರಿಸದು
(ಜ್ಞಾನೋ. 10:22).

ಪ್ರಾಮುಖ್ಯವಾದದ್ದಾಗಿದೆ.

ಎಫೆ. 1:15–18 ರಲ್ಲಿ **"ಹೀಗಿರಲಾಗಿ ಕರ್ತನಾದ ಯೇಸುವಿನಲ್ಲಿ ನೀವು ಇಟ್ಟಿರುವ ನಂಬಿಕೆಯನ್ನು ಕುರಿತೂ ದೇವಜನರೆಲ್ಲರಿಗೆ ನೀವು ತೋರಿಸುವ ಪ್ರೀತಿಯನ್ನು ಕುರಿತೂ ಕೇಳಿ ನಾನು ನಿಮ್ಮ ನಿಮಿತ್ತವಾಗಿ ಎಡಬಿಡದೆ ದೇವರಿಗೆ ಸ್ತೋತ್ರಮಾಡುತ್ತೇನೆ. ನನ್ನ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆಮಾಡಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ"**. ಹೋಶೆ. 4:6 ರಲ್ಲಿ ಕರ್ತನು ದು:ಖದಿಂದ ನನ್ನ ಜನರು ಜ್ಞಾನ ಹೀನರಾಗಿ ನಾಶವಾಗಿ ಹೋಗುತ್ತಿದ್ದಾರೆಂದು ಹೇಳುವುದನ್ನು ಗಮನಿಸಬಹುದು. ಸತ್ಯವೇದದ ಸತ್ಯಾರ್ಥಗಳನ್ನು ಮಕ್ಕಳಿಗೆ ವಿವರಿಸುವ ದೈವ ಜ್ಞಾನವನ್ನು ಪ್ರತಿಯೊಬ್ಬ ತಂದೆ ತಾಯಿಗೆ ಕರ್ತನು ಅನುಗ್ರಹಿಸಲಿ ಹಾಗೂ ಎಲ್ಲಾ ಮಕ್ಕಳು ದೇವರ ವಾಕ್ಯವನ್ನು ತಿಳುಕೊಂಡು ಫಲ ಭರಿತವಾದ ಕ್ರಿಸ್ತೀಯ ಜೀವಿತವನ್ನು ಜೀವಿಸಲು ಕರ್ತನಾದ ಯೇಸುಕ್ರಿಸ್ತನು ಅನುಗ್ರಹಿಸಲಿ.

ಕ್ರೈಸ್ತ ಕುಟುಂಬದಲ್ಲಿ 4 ಜನ ಮಕ್ಕಳಿದ್ದರು. ಆದರೆ ಅವರಿಗೆ ತಂದೆ ತಾಯಿಯವರು ಒಳ್ಳೆ ಭಕ್ತಿಯಲ್ಲಿ ಬೆಳೆಸಿದ್ದರು. ಕೀರ್ತ. 23,91,121,119,150 ಹೀಗೆ ಅನೇಕ ಕೀರ್ತನೆಗಳನ್ನು ಸತ್ಯವೇದದ ಅನೇಕ ವಾಕ್ಯಗಳನ್ನು ಕಂಠ ಪಾಠ ಮಾಡಿಕೊಂಡಿದ್ದರು. ಬೆಳೆಯುವಂಥ ಮಕ್ಕಳು ಯಾವುದೇ ದುರಾಭ್ಯಾಸವಿಲ್ಲದೆ ಚರ್ಚಿಗೆ ತಪ್ಪದೆ ಹೋಗುತ್ತಾ ಅನೇಕ ಸತ್ಯವೇದದ ಕ್ವಿಜ್‌ಗಳಲ್ಲಿ ಪ್ರಥಮ ಸ್ಥಾನ ತರುವಂಥವರಾಗಿದ್ದರು. ಆದರೆ ಬರಬರುತ್ತಾ 4 ಜನ ಗಂಡು ಮಕ್ಕಳು ದಾರಿ ತಪ್ಪಿ ದುರಾಭ್ಯಾಸಗಳಲ್ಲಿ ಬಿದ್ದು ದೈವ ಪ್ರೀತಿ ಕಳಕೊಂಡು ತಂದೆ ತಾಯಿಯ ದು:ಖಕ್ಕೆ ಕಾರಣರಾದರು. ತಂದೆ ತಾಯಿ ಎಷ್ಟು ಕಣ್ಣೀರಿಟ್ಟು ಬುದ್ಧಿ ಹೇಳಿದರೂ ಯಾವುದೇ ಪ್ರಯೋಜನವಾಗಲಿಲ್ಲ. 4 ಮಕ್ಕಳಲ್ಲಿ ಕೊನೆಯ ಮಗನಿಗೆ ಸುವಾರ್ತೆ ಸಿಕ್ಕಿತು. ಆತನು ತನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನನ್ನು ತನ್ನ ರಕ್ಷಕನಾಗಿ ಒಡೆಯನಾಗಿ ಅಂಗೀಕರಿಸಿ ತಂದೆ ಮಗ ಪರಿಶುದ್ಧಾತ್ಮನ ನಾಮದಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡನು, ಅವನ ಜೀವಿತದಲ್ಲಿ ದೊಡ್ಡ ಬದಲಾವಣೆಯಾಯಿತು. ನೆರೆಕರೆಯವರಿಗೂ, ಸಂಬಂಧಿಕರಿಗೂ, ಊರಿನವರಿಗೂ ದೊಡ್ಡ ಆಶ್ಚರ್ಯವಾಯಿತು. ಉಳಿದ ಅಣ್ಣಂದಿರು ಹಾಗೂ ತಾಯಿ ಈತನನ್ನು ದ್ವೇಷಿಸಲು ಆರಂಭಿಸಿದರು. ಅವನ ಜೀವಿತದಲ್ಲಿ ಉಂಟಾದ ಪರಿವರ್ತನೆ ನೋಡಿ ಸಂತೋಷಪಡಬೇಕಾದವರೇ ಉಪದ್ರವಿಸಲು ಆರಂಭಿಸಿದರು, ನೀನು ಜಾತಿ ಬಿಟ್ಟಿದ್ದೀ, ನೀನು ನಮ್ಮ ಸಭೆಯ ಆಚಾರಣೆಗಳ ಪ್ರಕಾರ ನಡೆಯುತ್ತಿಲ್ಲ ಎಂದು ಹೇಳಿ ತೊಂದರೆ ಕೊಡುವವರಾದರು. ಆತನು ಹೇಳಿದ ಸಭೆಯ ಆಚರಣೆಗಳು ನನ್ನನ್ನು ಬದಲಾಯಿಸಲು ಸಾಧ್ಯವಾಗದ್ದನ್ನು ದೇವರ ವಾಕ್ಯವು ಮಾಡಿದೆ. 1 ಥೆಸ. 2:13 ರಲ್ಲಿ ದೇವರ ವಾಕ್ಯವು ನಂಬುವವರೊಳಗೆ ಬಲವಾಗಿ ಕಾರ್ಯಮಾಡುತ್ತದೆ. ಯೋಹಾ. 8:31–32 ಸತ್ಯವನ್ನು ತಿಳಿದುಕೊಳ್ಳುವಿರಿ ಸತ್ಯವು ನಿಮ್ಮನ್ನು ಬಿಡುಗಡೆ ಮಾಡುತ್ತದೆ. ಈ ಎಲ್ಲಾ ವಾಕ್ಯಗಳ ಮೂಲಕವಾಗಿ ತಂದೆ ತಾಯಿ, ಅಣ್ಣಂದಿರು ಈತನ ಜೀವಿತವನ್ನು ಹಾಗೂ ಈತನಿಗೆ ಓದು ಬರಹ ಇಲ್ಲದಿದ್ದರೂ ಈತನ ಮೂಲಕ ವಿವರಿಸಲ್ಪಡುವ ವಾಕ್ಯ ಕೇಳಿ ಒಂದು ದಿನ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿ ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ, ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡರು. ಈಗ ಕುಟುಂಬವಾಗಿ ಒಂದು ಆತ್ಮೀಕ ಸಭೆಗೆ ಹೋಗುತ್ತಿದ್ದಾರೆ. ವಾಕ್ಯದ ವಿವರಣೆಯಿಂದ ತಿಳುವಳಿಕೆಯು ಫಲವನ್ನು ತರುವಂತದ್ದಾಗಿದೆ.

ಮುಂದುವರಿಯುವದು......

ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ

**ಸಹೋ॥ ಎಲಿಜಬೆತ್ ಸುನಿಲ್ ಜಾನ್ ಡಿ'ಸೋಜಾ.**

## ಪ್ರಾರ್ಥನಾ ಮನವಿಗಳು

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸಿ ಅಭಿವೃದ್ಧಿಪಡಿಸುವಂತೆ ಈ ಸೇವೆಗೆ ಬೇಕಾಗುವ ಆರ್ಥಿಕ ಅವಶ್ಯಕತೆಗಳನ್ನು ಕರ್ತನು ಸಂಧಿಸುವಂತೆ ಪ್ರಾರ್ಥಿಸಿರಿ.**
- **ದೇವರ ಸ್ವರ ಮಾಸ ಪತ್ರಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬರಿಗೆ ಕರ್ತನು ಒಳ್ಳೆಯ ಆರೋಗ್ಯವನ್ನು, ಬಲವನ್ನು ಕೊಟ್ಟು ಆತನ ವಿಶೇಷವಾದ ಜ್ಞಾನದಿಂದ ತುಂಬಿಸುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ಬಾಲ್ಯವಿವಾಹ ಪದ್ಧತಿ ನಿರ್ಮೂಲನೆಯಾಗುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿರುವ ಭ್ರಷ್ಟಾಚಾರ, ಭಯೋತ್ಪಾದನೆ, ಮೋಸ, ವಂಚನೆ, ನೀಗುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿರುವ ಪ್ರತಿಯೊಂದು ಅಧಿಕಾರಿಗಳು ನಂಬಿಗಸ್ತರಾಗಿ, ಪ್ರಮಾಣಿಕರಾಗಿ ದೇಶಕ್ಕೆ ಉತ್ತಮವಾದ ಸೇವೆ ಸಲ್ಲಿಸುವಂತೆ ಪ್ರಾರ್ಥಿಸಿರಿ.**
- **ಭಾರತ ದೇಶದಲ್ಲಿ ಬರಗಾಲ, ಅಂಟುರೋಗ, ಭೂಕಂಪ, ಅಹಿತಕರವಾದ ಘಟನೆಗಳು ನಡೆಯದಂತೆ ಕರ್ತನು ದೇಶವನ್ನು ಕಾಯ್ದುಕಾಪಾಡುವಂತೆ ಪ್ರಾರ್ಥಿಸಿರಿ.**

ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ

(ಕೀರ್ತ. 73:24).